ಜನತಾವಾಣಿ

ಸಂಪಾದಕರು :
ಎಂ.ಎಸ್.ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಗುರುವಾರ, ಜನವರಿ 16, 2020

ಸಂಪುಟ : 46 ಸಂಚಿಕೆ : 244 ದೂರವಾಣಿ : 254736 ವಾಟ್ಸ್‌ಆ್ಯಪ್ : 91642 99999 ಪುಟ : 8 ರೂ : 3.00 www.janathavani.com Email: janathavani@mac.com

ಜನ್ಮದಿನದ ಶುಭಾಶಯಗಳು

ಆತ್ಮೀಯ... ಗೆಳೆಯ

ಎಸ್.ವಿ. ರಾಮಚಂದ್ರ

ಜನಪ್ರಿಯ ಶಾಸಕರು ಜಗಳೂರು ವಿಧಾನಸಭಾ ಕ್ಷೇತ್ರ (ಮಾಜಿ ಅಧ್ಯಕ್ಷರು ಹಟ್ಟಿ ಚಿನ್ನದ ಗಣಿ)

ಗೆಳೆಯ ನಿನಗೆ ಹುಟ್ಟು-ಹಬ್ಬದ ಶುಭಾಶಯಗಳು...

ವಿಶಾಲ ಹೃದಯ... ನಿಷ್ಕಲ್ಮಶ ಮನಸು...
ಪ್ರತಿ ಮಾತಿನಲ್ಲೂ ಆತ್ಮೀಯತೆ...
ಎಲ್ಲರನ್ನೂ ಒಪ್ಪಿಕೊಳ್ಳುವಂತ ಆಪ್ತತೆ...
ಸದಾ ನಗು ಮುಖದ ಚೈತನ್ಯದ ಚಿಲುಮೆ....
ನಿಮ್ಮನ್ನು ಗೆಳೆಯ ಎನ್ನುವುದೇ ನಮಗೊಂದು ಹಿರಿಮೆ....
ಜಗಳೂರು ವಿಧಾನಸಭಾ ಕ್ಷೇತ್ರದ
ವ್ಯಾಪ್ತಿಯೊಳಗಿನ ಕೆರೆಗಳಿಗೆ
ನೀರುಣಿಸುವ ನಿನ್ನ ಕನಸಿನ ಯೋಜನೆ ಅತಿ ಶೀಘ್ರದಲ್ಲಿ
ಪೂರ್ಣಗೊಂಡು ರೈತರ ಬದುಕು ಹಸನಾಗಲಿ ಎಂದು
ಈ ಸಂದರ್ಭದಲ್ಲಿ ಹಾರೈಸುತ್ತೇವೆ...

ಇಂತಿ ನಿನ್ನ ಶಾಲಾ ಮತ್ತು ಕಾಲೇಜು ಸಹಪಾಠಿಗಳು

SRI VYSHNAVI CHETANA'S
CHETANA OLYMPIAD SCHOOL
NH-4 Bypass, Hadadi Road, Davangere Mob: 9900559103 / 9483979875

NTSE -2020
National Talent Search Examination

In Prestigeous NTSE - 2020 marks list
Among TOP 11 NTSE Mark scorers 10 STUDENTS are from
CHETANA OLYMPIAD SCHOOL - Davangere
STUDENTS (First Batch)

Congratulations to Top Mark Scorers

M S Baruni District 1st Mark
Bhuvana A District 2nd Mark
Adithi M P District 4th Mark
Vyshnavi H H District 5th Mark
Hithaishi P District 6th Mark
Yashas S H District 7th Mark
Bhoomika A District 8th Mark
Anurag B District 9th Mark
Kiran N R B District 10th Mark
Anusha B T District 11th Mark

India's Biggest Exhibition! 100 Stalls from all over India
MAKARA SANKRANTHI & MARRIAGE SEASON SPECIAL
Offer upto 65% Discount
NOW IN DAVANGERE

ರೇಣುಕಾ ಮಂದಿರ
P.B.ರೋಡ್ ದಾವಣಗೆರೆ
FROM 13.1.2020 TO 25.1.2020

Sarees | Ethnic Wear | Fabrics | Stoles & Dupattas | Home Linen

Kala Silk™
VASTHROTSAV-2020
HANDLOOM & HANDICRAFT EXHIBITION CUM SALE

ಆಂಧ್ರ ಪ್ರದೇಶ : ಧರ್ಮಾವರಂ, ವೆಂಕಟಗಿರಿ, ಮಂಗಳಗಿರಿ, ಕಾಲಾಂಕರಿ ಮತ್ತು ಉಪ್ಪಾಡ ಅಸ್ಸಾಂ: ಮೂಗಾ & ಎರಿ ಸಿಲ್ಕ್ಸ್ ಬಿಹಾರ್ : ಬಾಗಲ್ಪುರ ಸಿಲ್ಕ್ & ಟಸ್ಸರ್ ಚಟ್ಟೀಸ್‌ಗಡ್: ಟ್ರಬಲ್ ವರ್ಕ್ಸ್ ಕೋಸಾ ಸಿಲ್ಕ್ಸ್ ಗುಜರಾತ್: ಬಾಂದನಿ, ಕಚ್ಚ ಎಂಬ್ರೈಡರಿ ಡ್ರೆಸ್ಸ್ & ಸಾರೀಸ್ ಜಮ್ಮು & ಕಾಶ್ಮೀರ್: ಎಂಬ್ರೈಡರಿ ಸಾರೀಗಳು, ಡ್ರೆಸ್ ಮೆಟೀರಿಯಲ್ಸ್ & ಪಾಶ್ಮಿನ ಶಾಲ್ ಕರ್ನಾಟಕ : ಕ್ರೇಪ್ & ಪ್ರಿಂಟೆಡ್ ಸಾರಿಗಳು, ಡ್ರೆಸ್ ಮೆಟೀರಿಯಲ್‌ಗಳು ಮಧ್ಯಪ್ರದೇಶ : ಚಂದೇರಿ, ಮಹೇಶ್ವರಿ ರಾಜಸ್ಥಾನ : ಕೋಟಾ, ಬಾಂದೇಜ್, ಬ್ಲಾಕ್ ಪ್ರಿಂಟ್ಸ್, ಸಂಗ್ನೆರಿ ಪ್ರಿಂಟ್ಸ್ ಡ್ರೆಸ್ ಮೆಟೀರಿಯಲ್ಸ್ ತೆಲಂಗಾನ: ಗದ್ವಾಲ, ನಾರಾಯಣಪೇಟೆ & ಪೋಚಂಪಳ್ಳಿ ಉತ್ತರ ಪ್ರದೇಶ: ಜಮ್ದಾನಿ & ಬನಾರಸ್ ಲಕ್ನೋವಿ ಡ್ರೆಸ್ ಮೆಟೀರಿಯಲ್ಸ್ * ಹರಿಯಾಣ ಬೆಡ್ ಕವರ್‌ಗಳು & ಕುಶನ್ ಕವರ್ಸ್ * ಲಕ್ನೋವಿ ಕುರ್ತಿಸ್ & ಡ್ರೆಸ್ ಮೆಟೀರಿಯಲ್ಸ್ * ಡೋರ್ ಕರ್ಟನ್ಸ್, ಜೈಪುರಿ ಸ್ಟೋನ್ ಜ್ಯುವೆಲ್ಲರಿ * ಪರ್ಸ್, ಪುಡನ್‌ಹ್ಯಾಂಡಿಕ್ರಾಫ್ಟ್ * ಬಂಜಾರ & ಕೊಲ್ಕತ್ತ ಬ್ಯಾಗ್ಸ್, ಜೈಪುರಿ ರಾಜ್ಜಿ * ಒರಿಸ್ಸಾ ಪೈಟಿಂಗ್ & ಹ್ಯಾಂಡಿಕ್ರಾಫ್ಟ್

EXCHANGE OFFER
Upto 40% Discount on FURNITURE

All Debit / Credit Cards Accepted

Time : 10.30 am to 8.00 pm COLOURFUL EXHIBITION
Registered with office of development commissioner (Ministry of Textiles), Govt. of India.

ಜನ್ಮದಿನದ ಶುಭಾಶಯಗಳು

ಇಂದು ಜನ್ಮದಿನ ಆಚರಿಸಿಕೊಳ್ಳುತ್ತಿರುವ ಸ್ನೇಹ ಜೀವಿಗಳು,
ಸರಳ-ಸಜ್ಜನಿಕೆಯ ರಾಜಕಾರಣಿಗಳು, ಸಮಾಜ ಸೇವಕರು,
ಕ್ರೀಡಾಭಿಮಾನಿಗಳು, ದೀನ-ದುರ್ಬಲರ ಕಷ್ಟಗಳಿಗೆ ಸ್ಪಂದಿಸಿ,
ಜನ ಮನ ಗೆದ್ದಿರುವ ನಮ್ಮೆಲ್ಲರ ಪ್ರೀತಿಯ

ಸನ್ಮಾನ್ಯ ಶ್ರೀ ಡಾ|| ಎಸ್.ಎಸ್. ಬಕ್ಕೇಶ್

ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್ ಶಾಮನೂರು ಷುಗರ್ಸ್, ದುಗ್ಗಾವತಿ ಇವರಿಗೆ ಮತ್ತು
ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರು, ಕ್ರೀಡಾ ಸಾಂಸ್ಕೃತಿಕ ರಾಯಭಾರಿಗಳು,
ಜನಪರ ಕಾಳಜಿಯ ರಾಜಕಾರಣಿಗಳು, ಸ್ನೇಹ ಜೀವಿ, ಸರಳ ಸಜ್ಜನಿಕೆಯ, ರಾಜಕಾರಣಿ

ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ

ಅವರುಗಳಿಗೆ ಜನ್ಮದಿನದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತಾ,
ಶ್ರೀಯುತರುಗಳಿಗೆ ಭಗವಂತನು ಆಯುಷ್ಯ,
ಆರೋಗ್ಯ ಭಾಗ್ಯವನ್ನು ಸದಾ ನೀಡಲಿ ಎಂದು ಪ್ರಾರ್ಥಿಸುತ್ತೇವೆ....

ಸ್ನೇಹಿತರು, ಅಭಿಮಾನಿಗಳು ಹಾಗೂ ಹಿತೈಷಿಗಳು,
ದಾವಣಗೆರೆ, ಹರಪನಹಳ್ಳಿ ಮತ್ತು ಜಗಳೂರು.

ಸೈಟುಗಳು ಮಾರಾಟಕ್ಕಿವೆ
30x36 ಪಶ್ಚಿಮ, ಹೊಸ ಬನಶಂಕರಿ ಬಡಾವಣೆಯಲ್ಲಿ. 30x40 ದಕ್ಷಿಣ, ವಿನಾಯಕ ಬಡಾವಣೆಯಲ್ಲಿ. 30x36 ಉತ್ತರ, ವಿನಾಯಕ ಬಡಾವಣೆಯಲ್ಲಿ. ಪೂರ್ವ 30x40, 30x50 ಶಿವಪಾರ್ವತಿ ಬಡಾವಣೆಯಲ್ಲಿ.
ಮಂಜುನಾಥ, ಏಜೆಂಟ್
98444 91792

ಸೈಟುಗಳು ಮಾರಾಟಕ್ಕಿವೆ
ಸ್ವಾಮಿ ವಿವೇಕಾನಂದ ಬಡಾವಣೆಯಲ್ಲಿ
40x60 West, 40x60 North, 50x60 East, 30x50 North, 30x50 South, 30x40 West
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110, 93410 14130

ಹೋಂ ನರ್ಸಿಂಗ್ ಕೆಲಸ
ಮಹಿಳೆಯರು, ವಿಧವೆಯರು ಹಾಗೂ ಪುರುಷರಿಗೆ ನಮ್ಮ ಸಂಸ್ಥೆಯಿಂದ ಹೋಂ ನರ್ಸಿಂಗ್ ಕೆಲಸ ಲಭ್ಯವಿದೆ. ಊಟ, ವಸತಿಯೊಂದಿಗೆ (ಸಂಬಳ 10,000-22,000) ರವರೆಗೆ.
(ಸರ್ಕಾರಿ ನೋಂದಾಯಿತ ಸಂಸ್ಥೆ)
95139 17777, 97428 92222

ಸೈಟುಗಳು ಮಾರಾಟಕ್ಕಿವೆ
ಜೆ.ಎಚ್. ಪಟೇಲ್ ಬಡಾವಣೆಯಲ್ಲಿ
ಶಿವಪಾರ್ವತಿ ಲೇಔಟ್‌ನಲ್ಲಿ
30x44 North, 30x57 East, 40x30 East, 40x60 East, 40x60 West, 20x30 East
ಐನಳ್ಳಿ ಚನ್ನಬಸಪ್ಪ, ಏಜೆಂಟ್
99166 12110, 93410 14130

ಮನೆ ಬಾಡಿಗೆಗೆ
30x40 ಅಳತೆಯ 2 ಬೆಡ್ ರೂಂ, ಬೋರ್‌ವೆಲ್/ಕಾರ್ಪೊರೇಷನ್ ನೀರಿನ ಸೌಲಭ್ಯ ವಿರುವ ಗ್ರೌಂಡ್ ಫ್ಲೋರ್ ಸುಸಜ್ಜಿತ ಮನೆ ನಂ 363, 3ನೇ ಮೇನ್, 3 ಕ್ರಾಸ್, ಡಿಸಿಎಂ ಟೌನ್ ಶಿಪ್, ದಾವಣಗೆರೆ ಇಲ್ಲಿ ಬಾಡಿಗೆಗಿದೆ. ಸಸ್ಯಹಾರಿಗಳು ಮಾತ್ರ. ಸಂಪರ್ಕಿಸಿ :
ಮೊ : 9481625435

ಸೈಟು ಮಾರಾಟಕ್ಕೆ
ದಾವಣಗೆರೆ ಆರ್.ಟಿ.ಒ/ಎಸ್ ಪಿ ಆಫೀಸ್ ಎದುರು, ಫ್ಲೈಓವರ್ ಪಕ್ಕ ಎಡಭಾಗದಲ್ಲಿರುವ 30x40 ಅಡಿ ಅಳತೆಯ ಸೈಟು ನಂ 5, ಡೋರ್ ನಂ 1303-5 ಮಾರಾಟಕ್ಕಿದೆ.
ಆಸಕ್ತರು ಸಂಪರ್ಕಿಸಿ :
ಮೊ: 80957 01111

ಮನೆ ಬಾಡಿಗೆಗೆ ಇದೆ
ಶಿವಕುಮಾರಸ್ವಾಮಿ ಬಡಾವಣೆ, ಮೊದಲನೇ ಹಂತ, ಸರ್ ಎಂ.ವಿ. ಕಾಲೇಜು ಹತ್ತಿರ, ಮೊದಲನೆ ಮಹಡಿಯಲ್ಲಿರುವ ಸಿಂಗಲ್ ಬೆಡ್ ರೂಂ ಮನೆ ಬಾಡಿಗೆಗೆ ಇದೆ. ವಿಚಾರಿಸಿರಿ:
93484 54139
94489 24314

Sri Sairam
WANTED
CBSE Tuition Teacher post (Female) 2 Years Experience
Address: Sri Sai Chiranjivi School Mothi Doddappa Layout, Near Aaraike Hospital, Davanagere.
Ph: 98443 33507, 98440 03603

ಅಭಯ್ ಇಂಡಸ್ಟ್ರೀಸ್
ನಮ್ಮಲ್ಲಿ ಪೇಪರ್ ಪ್ರಾಡಕ್ಟ್ : ಟಿಶ್ಯೂ ಪೇಪರ್, ಪೇಪರ್ ಕಪ್, ಪೇಪರ್ ಬ್ಯಾಗ್, ಡೈನಿಂಗ್ ಟೇಬಲ್ ಪೇಪರ್ ರೋಲ್ ದೊರೆಯುತ್ತವೆ. ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ:
78921 94865
95353 80894

ಗ್ರಾವಲ್ ಸಿಗುತ್ತದೆ
ನಮ್ಮಲ್ಲಿ ಉತ್ತಮ ಗುಣಮಟ್ಟದ ಗ್ರಾವಲ್ ಯೋಗ್ಯ ದರದಲ್ಲಿ ಸಿಗುತ್ತದೆ ಸಂಪರ್ಕಿಸಿ:
98447 71108
97317 89404

ಬೇಕಾಗಿದ್ದಾರೆ
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ಗ್ರಾಮಾಂತರ ಪ್ರದೇಶದ ಅಭ್ಯರ್ಥಿಗಳಿಗೆ ಊಟ, ವಸತಿ ಸೌಲಭ್ಯವಿದೆ.
ಸಂಪರ್ಕಿಸಿ : 98442-94446

ಬೇಕಾಗಿದ್ದಾರೆ
RO ಪ್ಯೂರಿಫೈಯರ್ ಸರ್ವೀಸ್ ಮಾಡಲು ಟೆಕ್ನೀಷಿಯನ್ಸ್ ಬೇಕಾಗಿದ್ದಾರೆ. ಸಂಬಳ-15000-00+ಕಮೀಷನ್ (ವಸತಿ ಸೌಲಭ್ಯವಿದೆ)
ಜಯನಗರ, ಬೆಂಗಳೂರು.
98453 44346

ಮನೆ ಮಾರಾಟಕ್ಕಿದೆ
5 ಬೆಡ್ ರೂಂ, 44x60 ಅಳತೆಯಲ್ಲಿ 6 ಬಾತ್ ರೂಂ ಇರುವ ಎಂ.ಸಿ.ಸಿ. 'ಬಿ' ಬ್ಲಾಕ್, ದಾವಣಗೆರೆಯಲ್ಲಿ ಮನೆ ಮಾರಾಟಕ್ಕಿದೆ. ಆಸಕ್ತರು ಸಂಪರ್ಕಿಸಿ :
ಶ್ರೀಮತಿ ಪ್ರಭಾರಾಜ್
98457 15951

ವಿಶೇಷ ಚೇತನ ಮಕ್ಕಳಿಗಾಗಿ
ನುರಿತ ತರಬೇತುದಾರ ಶಿಕ್ಷಕರಿಂದ ಶಿಕ್ಷಣ ಮತ್ತು ವೃತ್ತಿಪರ ಕೌಶಲ್ಯಾಭಿವೃದ್ಧಿ ತರಬೇತಿ ಹಾಗು ಕಾಳಜಿಯುಕ್ತ ಆರೈಕೆ ಕೇಂದ್ರ.
ಜ್ಞಾನಧಾರೆ ಪುನರುತ್ಥಾನ ವಿದ್ಯಾಸಂಸ್ಥೆ (ರಿ.)
ಸಂಪರ್ಕಿಸಿ:
95903 80251, 93412 68306
Not Disable It's Differently Able.
ಹಾಸ್ಟೆಲ್ ವ್ಯವಸ್ಥೆ ಇರುತ್ತದೆ.

ಬೇಕಾಗಿದ್ದಾರೆ
ಅಂಗಡಿಯಲ್ಲಿ ಸಾಮಾನು ತೆಗೆದುಕೊಡಲು ಹುಡುಗರು ಬೇಕಾಗಿದ್ದಾರೆ - 4 ಜನ. ಕಂಪ್ಯೂಟರ್ ಜ್ಞಾನವುಳ್ಳ ಯುವತಿಯರು ಬೇಕಾಗಿದ್ದಾರೆ. Tally ಕಲಿತವರಿಗೆ ಮೊದಲ ಆದ್ಯತೆ ನೀಡಲಾಗುವುದು.
ಸಂಪರ್ಕಿಸಿ:ಕಶೆಟ್ಟರ್ ಇಂಡಸ್ಟ್ರೀಯಲ್ ಎಸೆನ್ಸಿಯಲ್ಸ್ ಲಾಯರ್ ರಸ್ತೆ, ಟಯರ್ ಶಾಪ್ ಹತ್ತಿರ, ದಾವಣಗೆರೆ.

ಹೊಸದಾಗಿ ಕಟ್ಟಿರುವ ಮಳಿಗೆಗಳು ಬಾಡಿಗೆಗೆ ಇವೆ
ತ್ರಿಶೂಲ್ ರಸ್ತೆಯಲ್ಲಿ ಅಂಗಡಿ ಮತ್ತು ಆಫೀಸ್‌ಗಳಿಗೆ ಅಟ್ಯಾಚ್ ಬಾತ್ ರೂಂ. ನೊಂದಿಗೆ ಹೊಸದಾಗಿ ಕಟ್ಟಿರುವ 450, 350 ಮತ್ತು 350 ಅಡಿಗಳಿರುವ ಮಳಿಗೆ ಮತ್ತು ಹಾಲ್‌ಗಳು. ಸಂಪರ್ಕಿಸಿ :
94830 93940

ಕೇವಲ 30 ದಿನಗಳಲ್ಲಿ
ನುರಿತ ಶಿಕ್ಷಕರಿಂದ ಕಂಪ್ಯೂಟರ್ ಮತ್ತು ಮೊಬೈಲ್ ರಿಪೇರಿ ತರಬೇತಿಯೊಂದಿಗೆ ಉಚಿತ ವಸತಿ ಮತ್ತು Latest Problems Solved DVD Kit ನೀಡಲಾಗುವುದು.
ಫ್ಯೂಚರ್ ಕೇರ್
99029 99615, 99025 45387

FOR SALE
5 BHK 44x60 house with 6 bathrooms in MCC `B' Block, Davanagere.
Contact: Mrs Prabha Raj
9845715951

ಶ್ರೀ ಮಾರುತಿ ಚಿಟ್ ಫಂಡ್ಸ್ (ರಿ.)
ಹೊಸ ಚೀಟಿ ಗುಂಪುಗಳ ಪ್ರಾರಂಭ
3000x25=75000,
20,000x30=6,00,000
2000x50=1,00,000
94483 39231, 9986 122909

Quality Computer Education
Now in HARIHAR
Tally. ERP9 With GST
Basic Computers
Avail Spl Discount
The Institute of Accounts & Tax Management
Temple Road, Opp: Vasavi Kalyana Mantap, HRR
Shruthi SK (CA) - 97438 06120,
Rudresh D(CA) - 80503 32958

ತಕ್ಷಣ ಬೇಕಾಗಿದ್ದಾರೆ
ಕಂಪನಿಯ ದಾವಣಗೆರೆ ವಿಭಾಗಕ್ಕೆ 10th, PUC, ITI, Diploma & Any Degree ಆದ Age (18-24), Earn (8500 - 15000) PM. 1 Photo Resume, Aadhar Xerox ನೊಂದಿಗೆ ಸಂಪರ್ಕಿಸಿ:
81056 00262

ಗೀರ್ ತಳಿಯ ಹಸುವಿನ ಹಾಲಿಗಾಗಿ ಸಂಪರ್ಕಿಸಿ
A 2 Milk
81974 49951
63621 72293

ವೈಯಕ್ತಿಕ ದ್ವೇಷ, ನಿಂದನೆಯಿಂದ ಮನಗಳನ್ನು ಗೆಲ್ಲಲು ಸಾಧ್ಯವಿಲ್ಲ

ನಿಟ್ಟೂರು ಬಸಾಪುರದ ತುಂಗಭದ್ರಾ ನದಿ ದಡದಲ್ಲಿನ ಮಕರ ಸಂಕ್ರಾಂತಿ ಹಬ್ಬದಲ್ಲಿ ಲತಾ ಮಲ್ಲಿಕಾರ್ಜುನ್

ಹರಪನಹಳ್ಳಿ, ಜ.15- ವೈಯಕ್ತಿಕ ದ್ವೇಷ, ನಿಂದನೆಯಿಂದ ಮನಗಳನ್ನು ಗೆಲ್ಲಲು ಸಾಧ್ಯವಿಲ್ಲ. ಪ್ರೀತಿ, ವಾತ್ಸಲ್ಯಗಳಿಂದ ಎಲ್ಲರನ್ನು ಜಯಿಸಬೇಕಾಗಿದೆ ಎಂದು ರಾಜ್ಯ ಕಾಂಗ್ರೆಸ್ ಮಹಿಳಾ ಕಾರ್ಯದರ್ಶಿ ಎಂ.ಪಿ. ಲತಾ ಮಲ್ಲಿಕಾರ್ಜುನ್ ತಿಳಿಸಿದರು.

ತಾಲ್ಲೂಕಿನ ನಿಟ್ಟೂರು ಬಸಾಪುರ ಗ್ರಾಮದ ತುಂಗಭದ್ರಾ ನದಿ ದಡದಲ್ಲಿ ಪ್ರತಿ ವರ್ಷದಂತೆ ಮಕರ ಸಂಕ್ರಾಂತಿ ಹಬ್ಬವನ್ನು ಎಳ್ಳು-ಬೆಲ್ಲ ಬೀರಿ ಸಾಮೂಹಿಕ ರೊಟ್ಟಿ ಊಟದ ಸವಿಯೊಂದಿಗೆ ಅವರು ಮಾತನಾಡಿದರು.

ನಮ್ಮ ಪೂರ್ವಿಕರು ಹಬ್ಬ-ಹರಿದಿನಗಳನ್ನು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಸಂಪ್ರದಾಯಗಳನ್ನು ರೂಢಿ ಮಾಡಿದ್ದಾರೆ. ಅವುಗಳನ್ನು ಮುಂದಿನ ಪೀಳಿಗೆಯು ಆಚರಣೆ ಮಾಡುವ ಸಂಸ್ಕೃತಿಯನ್ನು ನಾವು ಮಕ್ಕಳಲ್ಲಿ ಬೆಳೆಸಬೇಕಿದೆ. ಪ್ರತಿ ಹಬ್ಬಗಳಲ್ಲಿ ವಿಶಿಷ್ಟ ರೀತಿಯ ಭಕ್ಷ್ಯಗಳನ್ನು ತಯಾರಿಸಿ, ನೈವೇದ್ಯ ಮಾಡುವ ಪರಿಪಾಠ ನಮ್ಮಲ್ಲಿ ಚಾಲ್ತಿಯಲ್ಲಿದೆ. ಪ್ರಮುಖವಾಗಿ ಸಂಕ್ರಾಂತಿ ಹಬ್ಬ ಚಳಿಗಾಲ ಮುಗಿಸಿ, ಬೇಸಿಗೆ ಕಾಲಕ್ಕೆ ಪಾದಾರ್ಪಣೆ ಮಾಡುವ ಕಾಲ. ಈ ಹಬ್ಬದಲ್ಲಿ ಎಳ್ಳು-ಬೆಲ್ಲ ಹಂಚಿ ಆಚರಣೆ ಮಾಡುವುದರಲ್ಲಿ ವೈಜ್ಞಾನಿಕ ಮಹತ್ವವಿದೆ. ಹಿರಿಯರ ಸಂಪ್ರದಾಯಗಳನ್ನು ಉಳಿಸಿ, ಬೆಳೆಸಲು ಇಂತಹ ಹಬ್ಬ-ಹರಿದಿನಗಳನ್ನು ಸಾಮೂಹಿಕವಾಗಿ ಆಚರಣೆ ಮಾಡೋಣ. ಜಾತಿ-ಮತಗಳ ಭೇದವಿಲ್ಲದೇ ಒಟ್ಟಾಗಿ ಊಟ ಸವಿಯುವ ಮೂಲಕ ಸಾಮರಸ್ಯ ಬೆಸೆಯುವುದೇ ಇದರ ಉದ್ದೇಶ. ಯುವ ಸಮೂಹ ಟಿವಿ, ಮೊಬೈಲ್‌ಗಳ ದಾಸ್ಯದಿಂದ ಹೊರಗೆ ಬರಬೇಕಾಗಿದೆ. ಸುಸಂಸ್ಕೃತ ಭಾಷೆಯ ಪ್ರಯೋಗ ತಾಲ್ಲೂಕಿನಲ್ಲಿ ಅವಶ್ಯವಾಗಿದೆ. ಇಂದಿನಿಂದ ಕೆಟ್ಟ ಮಾತಿಗೆ ಕಡಿವಾಣ ಹಾಕೋಣ ಎಂದು ಹೇಳಿದರು.

ರವಿ ಯುವ ಶಕ್ತಿ ಪಡೆ ಅಧ್ಯಕ್ಷ ಮಾಗಾನ ಹಳ್ಳಿ ಉದಯಶಂಕರ್, ವಕೀಲರುಗಳಾದ ಪ್ರಕಾಶ್ ಪಾಟೀಲ್, ಡಿ.ಅಬ್ದುಲ್ ರೆಹಿಮಾನ್, ಟಿ.ಎ.ಪಿ.ಸಿ. ಎಂ.ಎಸ್ ಅಧ್ಯಕ್ಷ ಮಲ್ಲಿಕಾರ್ಜುನ ಸ್ವಾಮಿ ಕಲ್ಮಠ, ಕಂಚಿಕೇರಿ ಜಯಲಕ್ಷ್ಮಿ ಮಾತನಾಡಿದರು.

ಹಲುವಾಗಲು ಗ್ರಾ.ಪಂ. ಅಧ್ಯಕ್ಷರಾದ ರತ್ನಮ್ಮ ಸೋಮಪ್ಪ, ಯಡಿಹಳ್ಳಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಶೇಖರಪ್ಪ, ತಾಲ್ಲೂಕು ಪಂಚಾಯಿತಿ ಮಾಜಿ ಅಧ್ಯಕ್ಷ ಹೆಚ್.ರಾಜಪ್ಪ, ಪುರಸಭೆ ಸದಸ್ಯರಾದ ಗೊಂಡಿ ನಾಗರಾಜ್, ಜಾಕೀರ್ ಹುಸೇನ್, ಮುಖಂಡರಾದ ಮಲ್ಲಿಕಾರ್ಜುನ್, ಕೆ.ಎಂ.ಬಸವರಾಜಯ್ಯ, ಉಮಾಶಂಕರ್, ಎಸ್.ಕೆ.ಸಮೀವುಲ್ಲಾ, ಸೋಮಣ್ಣ, ಪೂಜಾರ್ ಮಂಜುನಾಥ್, ಟಿ.ಹೆಚ್.ಎಂಮಂಜುನಾಥ್, ದಕ್ಷಿಣಮೂರ್ತಿ, ಮುದ್ಗಲ್ ಗುರುನಾಥ್, ಬೆನ್ನೂರು ಶಶಿಧರ್, ಪುಷ್ಪ ದಿವಾಕರ್, ಮಂಜುಳಾ ಗುರುಮೂರ್ತಿ, ಕವಿತಾ ಸುರೇಶ್, ನೇತ್ರಾವತಿ, ರುದ್ರಪ್ಪ ಹಲುವಾಗಲು, ಅರುಣ ಪೂಜಾರ್, ಡಾ. ಮುಜಾವರ್, ನಾರಾಯಣ, ಯರಬಳ್ಳಿ ಬಸವರಾಜ್, ವೃಷಭೇಂದ್ರ, ಹುಲಿ ರಮೇಶ್ ಮತ್ತಿತರರಿದ್ದರು.

ಟೈಲ್ಸ್ ಕೆಲಸಗಾರನ ಮನೆಯಲ್ಲಿ ಕಳ್ಳತನ

ಲಕ್ಷಕ್ಕೂ ಅಧಿಕ ಮದುವೆ ಉಡುಗೊರೆ ಕಳವು

ದಾವಣಗೆರೆ, ಜ.15- ಕುಟುಂಬ ಸಮೇತ ಸಂಬಂಧಿಕರ ಕಾರ್ಯಕ್ರಮಕ್ಕೆ ತೆರಳಿದ್ದ ಟೈಲ್ಸ್ ಕೆಲಸಗಾರನ ಮನೆಯ ಬೀಗ ಮುರಿದು ಆತನ ತಂಗಿ ಮದುವೆ ಉಡುಗೊರೆಯ ಒಟ್ಟು 1 ಲಕ್ಷದ 30 ಸಾವಿರದಷ್ಟು ನಗದು ಮತ್ತು ಚಿನ್ನಾಭರಣವನ್ನು ಕಳ್ಳರು ದೋಚಿರುವ ಘಟನೆ ಇಲ್ಲಿನ ಆಜಾದ್ ನಗರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಬೇತೂರು ರಸ್ತೆ ಕೊರಮರ ಕಾಲೋನಿ ವಾಸಿ ರಮೇಶ್ ಎಂಬ ಟೈಲ್ಸ್ ಕೆಲಸಗಾರನ ಮನೆಯಲ್ಲಿ ಕಳ್ಳತನವಾಗಿದೆ.

ತನ್ನ ಎರಡನೇ ತಂಗಿ ಮದುವೆ ನಿಶ್ಚಯವಾಗಿದ್ದು, ಮದುವೆಗೆ ಉಡುಗೊರೆಗೆ 65 ಸಾವಿರ ನಗದು, 25 ಸಾವಿರ ಮೌಲ್ಯದ 10 ಗ್ರಾಂ ತೂಕದ 2 ಜೊತೆ ಬೆಂಡೋಲಿ, 5 ಸಾವಿರ ಮೌಲ್ಯದ 3 ಗ್ರಾಂನ ಜುಮಕಿ, 30 ಸಾವಿರ ಮೌಲ್ಯದ 14 ಗ್ರಾಂ ತೂಕದ 3 ಜೊತೆ ಹ್ಯಾಂಗಿಂಗ್ಸ್, ಬಂಗಾರದ ಸಾಮಾನುಗಳು ಸೇರಿ ಒಟ್ಟು 65 ಸಾವಿರ ಮೌಲ್ಯದ ಬಂಗಾರದ ಆಭರಣಗಳನ್ನು ಮನೆಯ ಗಾಡ್ರೇಜ್ ನ ಬೀರುವಿನಲ್ಲಿಡಲಾಗಿತ್ತು.

ಸಂಬಂಧಿಯ ಮಗನ ಜವಳ ಕಾರ್ಯಕ್ರಮವು ಕೊಪ್ಪಳ ಜಿಲ್ಲೆ ಹುಲಿಗಿ ಗ್ರಾಮದಲ್ಲಿದ್ದ ಕಾರಣ ಇದೇ ಸೋಮವಾರದಂದು ಮನೆಗೆ ಬೀಗ ಹಾಕಿಕೊಂಡು ಕುಟುಂಬ ಸಮೇತವಾಗಿ ಕಾರ್ಯಕ್ರಮಕ್ಕೆ ಹೋಗಲಾಗಿತ್ತು.

ಕೊಕ್ಕನೂರು ಹಾ.ಉ. ಸಂಘದ ಅಧ್ಯಕ್ಷರಾಗಿ ದಾಸರ ಲಕ್ಷ್ಮಪ್ಪ

ಮಲೇಬೆನ್ನೂರು, ಜ.15- ಕೊಕ್ಕನೂರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ನೂತನ ಅಧ್ಯಕ್ಷರಾಗಿ ದಾಸರ ಲಕ್ಷ್ಮಪ್ಪ ಮತ್ತು ಉಪಾಧ್ಯಕ್ಷರಾಗಿ ತಿಪ್ಪಣ್ಣರ ನಾಗಪ್ಪ ಅವರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಂಘದ ನಿರ್ದೇಶಕರಾದ ದಾಸರ ಸುರೇಶ್, ದಾಸರ ಈಶ್ವರಪ್ಪ, ಡಿ.ಎಸ್. ಚೇತನ್‌ಕುಮಾರ್, ಕವಿತಾ ಡಿ. ಆಂಜನೇಯ, ಲಲಿತಮ್ಮ ಎಂ. ಹನುಮಂತಪ್ಪ, ಸಣ್ಣ ಬಸಪ್ಪರ ಹನುಮಂತಪ್ಪ, ಹೆಚ್. ಚಂದ್ರಪ್ಪ, ಬಿ. ಹನುಮಂತಪ್ಪ, ಎ.ಕೆ. ಗಂಗಮ್ಮ, ಗಡಗಿ ರಾಮಪ್ಪ, ಎ. ಚಂದ್ರಪ್ಪ ಮತ್ತು ಗ್ರಾ.ಪಂ. ಮಾಜಿ ಅಧ್ಯಕ್ಷ ಕೆ.ಹೆಚ್. ಕೊಟ್ರಪ್ಪ, ಸಂಘದ ಮಾಜಿ ಅಧ್ಯಕ್ಷರಾದ ಡಿ. ಸೋಮಶೇಖರ್, ಹೆಚ್. ತಿಮ್ಮಣ್ಣ, ಡಿ. ನಾಗರಾಜಪ್ಪ, ಹೆಚ್. ನಾಗರಾಜ್, ಡಿ.ಎಲ್. ನಾಗರಾಜ್, ದಾಸರ ಶಿವಪ್ಪ, ಹೆಚ್. ಮಹಾದೇವಪ್ಪ ಮತ್ತಿತರರು ಹಾಜರಿದ್ದು, ಅವಿರೋಧ ಆಯ್ಕೆಗೆ ಸಹಕರಿಸಿದರು.

ಸಹಕಾರ ಅಭಿವೃದ್ಧಿ ಅಧಿಕಾರಿ ಎನ್.ಜಿ. ರುದ್ರಪ್ಪ ಚುನಾವಣಾಧಿಕಾರಿಯಾಗಿದ್ದರು. ಸಂಘದ ಕಾರ್ಯದರ್ಶಿ ದಾಸರ ಶಾಂತಪ್ಪ ಸ್ವಾಗತಿಸಿದರು.

ನರಸೀಪುರ : ಸಂಭ್ರಮದ ರಥೋತ್ಸವ

ಹಾವೇರಿ,ಜ.15- ತಾಲ್ಲೂಕಿನ ಸುಕ್ಷೇತ್ರ ನರಸೀಪುರದಲ್ಲಿರುವ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದಲ್ಲಿ ಅಂಬಿಗರ ಚೌಡಯ್ಯನವರ ಶರಣ ಸಂಸ್ಕೃತಿ ಉತ್ಸವ ಮತ್ತು 900ನೇ ಜಯಂತ್ಯೋತ್ಸವದ ಅಂಗವಾಗಿ ಇಂದು ಬೆಳಿಗ್ಗೆ ಅಂಬಿಗರ ಚೌಡಯ್ಯನವರ ಮಹಾರಥೋತ್ಸವವು ಶ್ರೀ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ, ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸಂಭ್ರಮದಿಂದ ಜರುಗಿತು.

ನಗರದಲ್ಲಿಂದು ಸಿದ್ಧರಾಮೇಶ್ವರ ಜಯಂತಿ

ಶಿವಯೋಗಿ ಸಿದ್ಧರಾಮೇಶ್ವರ ಜಯಂತ್ಯೋತ್ಸವ, ಬಸವಾದಿ ಶಿವಶರಣರ ವಚನ ಭಂಡಾರ ಉದ್ಘಾಟನೆ ಹಾಗೂ ಶರಣ ವೀರಗೊಲ್ಲಾಳೇಶ ಮತ್ತು ಶರಣ ಉರಿಲಿಂಗಪೆದ್ದಿ ನಾಟಕ ಪುಸ್ತಕಗಳ ಬಿಡುಗಡೆ ಸಮಾರಂಭವು ಇಂದು ಸಂಜೆ 5.30 ಕ್ಕೆ ಸರಸ್ವತಿ ನಗರದ ಬಸವಬಳಗ-ಬಸವ ಮಹಾಮನೆಯಲ್ಲಿ ನಡೆಯಲಿದೆ.

ಬಸವ ಬಳಗ, ನೀಲಾಂಬಿಕಾ ಅನುಭಾವಕೇಂದ್ರ ಹಾಗೂ ಅಜ್ಜಂಪುರಶೆಟ್ರು ಸೇವಾ ಟ್ರಸ್ಟ್ ಇವರು ಆಯೋಜಿಸಿರುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಿ. ಸಿದ್ಧರಾಮಣ್ಣ ವಹಿಸುವರು. ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಉದ್ಘಾಟಿಸುವರು.

ಸಿದ್ಧಣ್ಣ ಲಂಗೋಟಿ ಅವರು ರಚಿಸಿರುವ ಪುಸ್ತಕ ಬಿಡುಗಡೆ ಮಾಡಿ, ಅನುಭಾವ ನಡೆಸಿಕೊಡುವರು. ಮುಖ್ಯ ಅತಿಥಿಗಳಾಗಿ ಕೆ.ಎಂ. ವೀರೇಶ್ ಆಗಮಿಸುವರು.

ನೀಲಾನಹಳ್ಳಿಯಲ್ಲಿ ಇಂದಿನಿಂದ ಎನ್ನೆಸ್ಸೆಸ್ ಶಿಬಿರ

ದಾವಣಗೆರೆಯ ಬಿ.ಎಸ್. ಚನ್ನಬಸಪ್ಪ ಪ್ರಥಮ ದರ್ಜೆ ಕಾಲೇಜು ವತಿಯಿಂದ ಇಂದಿನಿಂದ ಇದೇ ದಿನಾಂಕ 22 ರವರೆಗೆ ರಾಷ್ಟ್ರೀಯ ಸೇವಾ ಯೋಜನೆ ಶಿಬಿರವನ್ನು ದಾವಣಗೆರೆ ತಾಲ್ಲೂಕು ನೀಲಾನಹಳ್ಳಿಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಬೆಳಿಗ್ಗೆ 11 ಸ್ವಯಂ ಸೇವಕರಿಂದ ಗ್ರಾಮದಲ್ಲಿ ಪಥಸಂಚಲನೆ ನಡೆಯುವುದು. ಸಂಜೆ 6 ಗಂಟೆಗೆ ಶಿಬಿರದ ಉದ್ಘಾಟನಾ ಸಮಾರಂಭ ನಡೆಯುವುದು. ಶಿಬಿರವನ್ನು ಬಿ.ಸಿ. ಶಿವಕುಮಾರ್ ಉದ್ಘಾಟಿಸುವರು. ಪ್ರೊ. ಎಂ.ಹೆಚ್ ಬೇತೂರು ಮಠ ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಬಿ.ಎಸ್. ಪ್ರದೀಪ್, ಜೆ. ಸಂತೋಷ್‌ಕುಮಾರ್, ಎನ್.ಎ. ಮುರುಗೇಶ್, ಆರ್. ವೆಂಕಟರೆಡ್ಡಿ, ಎಸ್.ಕೆ. ವೀರಣ್ಣ ಆಗಮಿಸುವರು.

ಕಾರ್ಯಕ್ರಮದಲ್ಲಿ ಶ್ರೀಮತಿ ರೇಣುಕಮ್ಮ, ಶ್ರೀಮತಿ ಮಮತ, ಶ್ರೀಮತಿ ಹಾಲವ್ವರ ಸುನಂದಮ್ಮ, ಬಿ.ಪಿ. ಕೆಂಚಪ್ಪ, ಡಾ. ಎನ್.ಎಂ. ಆಂಜನೇಯ ಗುರೂಜಿ, ಜೆ. ಪದ್ಮರಾಜ್, ಶ್ರೀಮತಿ ಸಲ್ಮಾಬಾನು, ಜೆ.ಎನ್. ಜೈಪಾಲ್, ಸೋಮನಾಯ್ಕ, ಶ್ರೀಮತಿ ರತ್ನಮ್ಮ ಎನ್.ಎ. ರಮೇಶ್, ಶ್ರೀಮತಿ ಕೆ. ಚೌಡಮ್ಮ, ಅಶ್ವತ್ಥ್ ಕುಮಾರ್, ಶಾಂತಪ್ಪ ಮೇಷ್ಟ್ರು, ಮಧುಚಂದ್ರ, ಶ್ರೀಮತಿ ಪ್ರೇಮಲೀಲಾ, ಮುರುಗೇಶ್, ಹನುಮಂತಗೌಡ ಉಪಸ್ಥಿತರಿರುವರು.

ನಿರ್ಭಯ : ಮರಣ ದಂಡನೆ ಮುಂದೂಡಲು ವ್ಯವಸ್ಥೆ ದುರ್ಬಳಕೆ

ದೆಹಲಿ ಹೈಕೋರ್ಟ್ ಆಕ್ರೋಶ

ನವದೆಹಲಿ, ಜ. 15 – ನಿರ್ಭಯ ಪ್ರಕರಣದಲ್ಲಿ ಮರಣ ದಂಡನೆಗೆ ಗುರಿಯಾಗಿರುವ ದೋಷಿಗಳು, ದಂಡನೆಯನ್ನು ವಿಳಂಬ ಮಾಡಲು ತಂತ್ರಗಾರಿಕೆ ಅನುಸರಿಸಿ ವ್ಯವಸ್ಥೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದು ದೆಹಲಿ ಹೈಕೋರ್ಟ್ ಆಕ್ರೋಶ ವ್ಯಕ್ತಪಡಿಸಿದೆ.

ಪ್ರಕರಣದ ದೋಷಿಯಾಗಿರುವ ಮುಕೇಶ್ ಕುಮಾರ್ ಸಿಂಗ್ ಮರಣ ದಂಡನೆ ತಡ ಮಾಡಲು, ವಿಳಂಬವಾಗಿ ಅರ್ಜಿ ಸಲ್ಲಿಸುತ್ತಿರುವುದಾಗಿ ನ್ಯಾಯಮೂರ್ತಿಗಳಾದ ಮನಮೋಹನ್ ಹಾಗೂ ಸಂಗೀತಾ ಢಿಂಗ್ರಾ ಸೆಹಗಲ್ ಅವರನ್ನು ಒಳಗೊಂಡ ಪೀಠ ಹೇಳಿದೆ.

ಸುಪ್ರೀಂ ಕೋರ್ಟ್ ಮರಣ ದಂಡನೆ ಪ್ರಶ್ನಿಸಿ ದಾಖಲಿಸಲಾಗಿದ್ದ ಅರ್ಜಿಯನ್ನು ತಿರಸ್ಕರಿಸಿ

ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ಎಂ.ಎಸ್.ವಿಕಾಸ್

ದಾವಣಗೆರೆ
ಗುರುವಾರ, ಜನವರಿ 16, 2020

ನನ್ನ ಮಾತಿನಿಂದ ನೋವಾಗಿದ್ದರೆ ನಿಮ್ಮ ಮಗ ಎಂದು ಹೊಟ್ಟೆಯಲ್ಲಿ ಹಾಕಿಕೊಳ್ಳಿ : ವಚನಾನಂದ ಶ್ರೀಗಳು

ಹರಿಹರ, ಜ. 15 - ನಮ್ಮ ಸಂಘಟನೆ, ಹೋರಾಟ ಯಾರ ವಿರುದ್ಧವೂ ಅಲ್ಲ. ನಾವು ಎಲ್ಲರಿಗೂ ಒಳ್ಳೆಯವರಾಗುವುದಕ್ಕೆ ಆಗಲ್ಲ, ಸಮಾಜಕ್ಕಾಗಿ ಕೆಲವು ಕಠಿಣ ಮಾತುಗಳನ್ನು ಆಡಿದ್ದೇವೆ. ನಿನ್ನೆ ಮತ್ತು ಇವತ್ತಿನ ನನ್ನ ಮಾತುಗಳಿಂದ ಯಾರಿಗಾದರೂ ನೋವಾಗಿದ್ದರೆ ನಿಮ್ಮ ಮಗ ಎಂದು ಹೊಟ್ಟೆಯಲ್ಲಿ ಹಾಕಿಕೊಳ್ಳಿ ಎಂದು ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಹೇಳಿದ್ದಾರೆ.

ಹರ ಜಾತ್ರೆಯ ಎರಡನೇ ದಿನವಾದ ಇಂದಿನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು ಈ ಹೇಳಿಕೆ ನೀಡಿದ್ದಾರೆ. ನಿನ್ನೆಯಷ್ಟೇ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ವಚನಾನಂದ ಶ್ರೀಗಳ ನಡುವೆ ವೇದಿಕೆಯ ಮೇಲೆ ಜಟಾಪಟಿ ನಡೆದಿತ್ತು. ಆದರೆ, ಶ್ರೀಗಳು ಈ ಘಟನೆಯನ್ನು ನೇರವಾಗಿ ಪ್ರಸ್ತಾಪಿಸಲಿಲ್ಲ. ಪಂಚಮಸಾಲಿ ಸಮಾಜದ ನೊಂದ ಮನಸ್ಸುಗಳಿಗೆ ಔಷಧಿಯಾಗಿ ಭಗವಂತ ನಮ್ಮನ್ನು ಈ ಪೀಠಕ್ಕೆ ಕಳುಹಿಸಿದ್ದಾನೆ. ನಾನು ಯೊಗ ಗುರುವಾಗಿ ಆಕಾಶದಲ್ಲಿ ಹಾರಬಲ್ಲೆ. ಸಮಾಜದ ಗುರುವಾಗಿ ನೆಲದಲ್ಲಿ ನಿಮ್ಮ ಜೊತೆ ನಡೆಯುವುದನ್ನೂ ಬಲ್ಲೆ ಎಂದರು.

ಯೊಗ ಮುಕ್ತ-ರೋಗ ಮುಕ್ತ ಸಮಾಜ ನಿರ್ಮಾಣ ನನ್ನ ಕನಸು. ಈ ಜಾತ್ರೆ ಇವತ್ತು ಮುಗಿಯುತ್ತದೆ. ಆದರೆ ನಮ್ಮ ಸಂಘಟನೆಯ ಜಾತ್ರೆ 365 ದಿನವೂ ಇರುತ್ತದೆ.
ನೀವು ಕರೆದಾಗ ನಿಮ್ಮ ಜೊತೆ ನಾವಿರುತ್ತೇವೆ ಎಂದು ಶ್ರೀಗಳು ತಿಳಿಸಿದರು.

ಸ್ವಾಮೀಜಿಗಳು ಈ ಥರ ಮಾತನಾಡಬಾರದು

ಹರ ಜಾತ್ರೆ ಜಟಾಪಟಿಗೆ ದಿನೇಶ್ ಗುಂಡೂರಾವ್ ಹೇಳಿಕೆ

ಬೆಂಗಳೂರು, ಜ. 15 - ಸ್ವಾಮೀಜಿಗಳು ಸಲಹೆ ನೀಡಬೇಕೇ ಹೊರತು ಬೆದರಿಸುವ ರೀತಿ ಮಾತನಾಡ ಬಾರದು ಎಂದು ಕಾಂಗ್ರೆಸ್ ನಾಯಕ ದಿನೇಶ್ ಗುಂಡೂರಾವ್ ಹೇಳಿದ್ದಾರೆ.

ಹರ ಜಾತ್ರೆಯಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ವಚನಾನಂದ ಶ್ರೀಗಳ ನಡುವೆ ನಡೆದ ಜಟಾಪಟಿ ಕುರಿತಂತೆ ಕೇಳಿದ ಪ್ರಶ್ನೆಗೆ ಅವರು ಈ ಉತ್ತರ ನೀಡಿದ್ದಾರೆ.

ಹೀಗೆ ಮಾಡಲೇ ಬೇಕು, ಮಾಡದೇ ಹೋದರೆ ಜನಾಂಗದ ಬೆಂಬಲ ಇರುವುದಿಲ್ಲ ಎಂದು ಬೆದರಿಸುವ ರೀತಿ ಮಾತನಾಡಿರುವುದು ಖಂಡಿತ ವಾಗಿಯೂ ಸರಿಯಲ್ಲ ಎಂದವರು ತಿಳಿಸಿದ್ದಾರೆ.

ಸಂಪುಟ ರಚನೆ ಸಿಎಂಗೆ ಪರಮಾಧಿಕಾರ : ಶೆಟ್ಟರ್

ಹುಬ್ಬಳ್ಳಿ, ಜ. 15 - ಸಂಪುಟ ರಚನೆ ಮುಖ್ಯಮಂತ್ರಿಯ ಪರಮಾಧಿಕಾರ. ಇಂಥವರನ್ನೇ ಮಂತ್ರಿ ಮಾಡಿ ಎನ್ನುವುದು ತಪ್ಪಾಗುತ್ತದೆ ಎಂದು ಸಚಿವ ಜಗದೀಶ್ ಶೆಟ್ಟರ್ ಹೇಳಿದ್ದಾರೆ.

ಪಂಚಮಸಾಲಿ ಜಗದ್ಗುರು ವಚನಾನಂದ ಶ್ರೀಗಳು ಸಮಾಜದ ಮೂವರು ಸಚಿವರನ್ನು ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳಲೇಬೇಕು ಎಂದು ಒತ್ತಡ ಹೇರಿದ ಹಿನ್ನೆಲೆಯಲ್ಲಿ ಅವರು ಈ ಹೇಳಿಕೆ ನೀಡಿದ್ದಾರೆ.

ಕಾವೇರಿದ ಕಾವಿ - ಖಾದಿ ಜಟಾಪಟಿ

ಓಟಿಗೆ ಸ್ವಾಮೀಜಿ ಬೇಕು, ಮಾತು ಕೇಳುವ ಸಹನೆ ಇಲ್ಲ

ಹರಿಹರ, ಜ. 15- ತಿಥಿ, ಪೂಜೆ, ಮದುವೆ ಹಾಗೂ ಓಟು ಹಾಕಿಸಿಕೊಳ್ಳಲು ಸ್ವಾಮೀಜಿಗಳು ಬೇಕು. ಆದರೆ ಅವರ ಮಾತು ಕೇಳುವ ಸಹನೆ ಇರುವುದಿಲ್ಲ ಎಂದರೆ ಹೇಗೆ? ಎಂದಿರುವ ಕಾಂಗ್ರೆಸ್ ನಾಯಕ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪಗೆ ತರಾಟೆಗೆ ತೆಗೆದುಕೊಂಡಿದ್ದಾರೆ.

ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಆಯೋಜಿಸಲಾಗಿದ್ದ ಹರ ಜಾತ್ರೆಯ ಎರಡನೇ ದಿನದ ಸಮಾರಂಭದಲ್ಲಿ ಅವರು ಮಾತನಾಡುತ್ತಿದ್ದರು.

ಮೊದಲ ದಿನದಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹಾಗೂ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ವಚನಾನಂದ ಶ್ರೀಗಳ ನಡುವೆ ನಡೆದ ಚಕಮಕಿಗೆ ಸಂಬಂಧಿಸಿದಂತೆ ಅವರು ಈ ಹೇಳಿಕೆ ನೀಡಿದ್ದಾರೆ. ಭಕ್ತ ಹಾಗೂ ದೇವರ ನಡುವೆ ವ್ಯವಹಾರಕ್ಕೆ ಪೂಜಾರಿ ಇರುವಂತೆ ಸಂಸ್ಕೃತಿ, ಧರ್ಮ ರಕ್ಷಣೆಗೆ ಹಿರಿಯರು ಮಠಾಧೀಶರನ್ನು ನೇಮಿಸಿದ್ದಾರೆ ಎಂದೂ ಅವರು ತಿಳಿಸಿದ್ದಾರೆ.

ವಚನಾನಂದ ಸ್ವಾಮೀಜಿಯವರ ವಯಸ್ಸು ಇನ್ನೂ ಚಿಕ್ಕದು. ಸಾಧನೆಗೆ ಇನ್ನೂ ಸಾಕಷ್ಟು ಅವಕಾಶವಿದೆ. ನಡೆಯುವವರು ಎಡವವುವುದು ಸಹಜ. ಕುಳಿತವರು

ಹರ ಜಾತ್ರೆಯಲ್ಲಿ ಯಡಿಯೂರಪ್ಪಗೆ ಡಿ.ಕೆ.ಶಿ. ತರಾಟೆ

ಎಡುವುದಿಲ್ಲ. ವಚನಾನಂದ ಶ್ರೀಗಳು ಆತ್ಮಸ್ಥೈರ್ಯ ಕಳೆದುಕೊಳ್ಳಬಾರದು ಎಂದು ಹೇಳಿದರು.

ರಾಜಕಾರಣದಲ್ಲಿ ಧರ್ಮ ಇರಬೇಕು. ಆದರೆ ಧರ್ಮ ದಲ್ಲಿ ರಾಜಕೀಯ ಇರಬಾರದು ಎಂದು ಹೇಳಿದ ಡಿಕೆಶಿ, ದೀರ್ಘ ಜೀವನಕ್ಕಿಂತ ದಿವ್ಯ ಜೀವನ ಮುಖ್ಯ ಎಂದರು.

ದೇವನೊಬ್ಬ ನಾಮ ಹಲವು ಎಂಬುದರಲ್ಲಿ ನಾನು ನಂಬಿಕೆ ಇಟ್ಟುಕೊಂಡವನು. ಮಕರ ಸಂಕ್ರಾಂತಿಯ ದಿನ ಪಂಚಮಸಾಲಿ ಪೀಠಕ್ಕೆ ಬಂದು ವಚನಾನಂದ ಶ್ರೀಗಳ ಭವ್ಯ ಮಂಟಪದಲ್ಲಿ ನಿಮ್ಮನ್ನೆಲ್ಲಾ ಭೇಟಿ ಮಾಡುವ ಅವಕಾಶ ನನ್ನ ಭಾಗ್ಯ ಎಂದರು.

ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಪೀಠದ ದ್ವಾದಶಮಾನೋತ್ಸವ ಹಾಗೂ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಮಹಾ ಸ್ವಾಮಿಗಳವರ ದ್ವಿತೀಯ ಪೀಠಾರೋಹಣ ಕಾರ್ಯಕ್ರಮ ಬುಧವಾರ ಅದ್ಧೂರಿಯಾಗಿ ನೆರವೇರಿತು.

ನಾಡಿನ ವಿವಿಧ ಭಾಗಗಳಿಂದ ಬಂದಿದ್ದ ಅಸಂಖ್ಯಾತ ಭಕ್ತರು, ಧಾರ್ಮಿಕ ಮುಖಂಡರು, ಜನಪ್ರತಿನಿಧಿಗಳು ಕಾರ್ಯಕ್ರಮಕ್ಕೆ ಸಾಕ್ಷಿಯಾಗಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪೀಠದ ಪ್ರಧಾನ ಧರ್ಮದರ್ಶಿ ಬಿ.ಸಿ. ಉಮಾಪತಿ ಮಾತನಾಡುತ್ತಾ, ಹಿಂದೆ ಕೆಲ ಧಾರ್ಮಿಕ ಪೀಠಗಳು ನಮ್ಮನ್ನು ಬಳಸಿಕೊಂಡು ನಂತರ ತುಳಿಯತೊಡಗಿದವು. ಇದರಿಂದಾಗಿ ಪಂಚಮಸಾಲಿ ಪೀಠ ಸ್ಥಾಪನೆಯಾಗಿದೆ. ಕೆಲವೇ ವರ್ಷಗಳಲ್ಲಿ ಪೀಠವು ಇಡೀ ರಾಜ್ಯಕ್ಕೆ ಮಾದರಿಯಾಗಿದೆ ಎಂದು ಹೇಳಿದರು.

ಸಮಾಜದ ಯುವಕರು ದುಶ್ಚಟಗಳ ದಾಸರಾಗದೆ ಸಮಾಜದ ಅಭಿವೃದ್ಧಿಗೆ ಕೈ ಜೋಡಿಸಬೇಕೆಂದು ಅವರು ಕರೆ ನೀಡಿದರು.

ವೀರಶೈವ ಲಿಂಗಾಯತ ಪಂಚಮಸಾಲಿ ಸಂಘದ ಗೌರವಾಧ್ಯಕ್ಷ ಬಾವಿ ಬೆಟ್ಟಪ್ಪ ಪ್ರಾಸ್ತಾವಿಕವಾಗಿ ಮಾತನಾಡಿದರು. ಧಾರವಾಡ ಮಾಜಿ ಸಚಿವ ವಿನಯ ಕುಲಕರ್ಣಿ, ಬೆಳಗಾವಿ ಶಾಸಕಿ ಲಕ್ಷ್ಮಿ ಹೆಬ್ಬಾಳ್ಕರ್, ಮಾಜಿ ಶಾಸಕ ಮಹಿಮಾ ಪಟೇಲ್, ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ ಹಾಗೂ ಇತರರು ಮಾತನಾಡಿದರು.

ವಚನಾನಂದ ಶ್ರೀ ಬೆದರಿಕೆ ಹಾಕುವುದನ್ನು ನಿಲ್ಲಿಸಲಿ : ಶಾಸಕ ಯತ್ನಾಳ್

ವಿಜಯಪುರ, ಜ. 15 - ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಜಗದ್ಗುರು ಶ್ರೀ ವಚನಾನಂದ ಸ್ವಾಮೀಜಿ ಅವರು ಬೇಕಾದ್ದನ್ನು ಮಾಡಲು ಯಾರೂ ಜಿ.ಪಿ.ಎ. ಬರೆದು ಕೊಟ್ಟಿಲ್ಲ. ಅವರು ಗೊಡ್ಡು ಬೆದರಿಕೆ ಹಾಕುವುದನ್ನು ನಿಲ್ಲಿಸಬೇಕು ಎಂದು ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಎಚ್ಚರಿಸಿದ್ದಾರೆ.

ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸರ್ಕಾರ ಮೂರುವರೆ ವರ್ಷ ಇರುತ್ತದೆ. ಯಡಿಯೂರಪ್ಪ ಮುಖ್ಯಮಂತ್ರಿ ಆಗಿ ಇರುತ್ತಾರೆ. ಸ್ವಾಮೀಜಿಗಳು, ಇತರರು ಸೇರಿದಂತೆ ಯಾರೂ ಗೊಡ್ಡು ಬೆದರಿಕೆಗಳನ್ನು ಹಾಕಬಾರದು ಎಂದು ಹೇಳಿದರು.

ಸ್ವಾಮೀಜಿಗಳಿಗೆ ಬೇಕಾದ್ದನ್ನೆಲ್ಲಾ ಮಾತನಾಡಲು ಜನರಲ್ ಪವರ್ ಆಫ್ ಅಟಾರ್ನಿ ಕೊಟ್ಟಿಲ್ಲ. ಒಬ್ಬ ಮಠಾಧೀಶರಾಗಿ ಗೌರವಯುತವಾಗಿ ಇರಬೇಕು. ಮುಖ್ಯಮಂತ್ರಿ ಅಂದರೆ ರಾಜ ಇದ್ದಂತೆ. ರಾಜನಿಗೆ ಯಾರೂ ಮಠಾಧೀಶರು ಬೆದರಿಕೆ ಹಾಕಬಾರದು ಎಂದರು.

ಕಾರ್ಯಕ್ರಮಕ್ಕೆ ಕರೆಯಿಸಿ ನಿರಾಣಿಗೆ ಮಂತ್ರಿ ಮಾಡಿ ಎಂದ ಸ್ವಾಮೀಜಿಗಳ ನಡವಳಿಕೆಯಿಂದ ಪಂಚಮಸಾಲಿ ಸಮಾಜಕ್ಕೆ ಅಪಮಾನವಾಗಿದೆ. ಇದೇ ರೀತಿ ನಿಮ್ಮ ವರ್ತನೆ ಮುಂದುವರೆದರೆ ನಾವು ಯಾವ ಶಾಸಕರೂ ಸುಮ್ಮನೆ ಕೂರುವುದಿಲ್ಲ ಎಂದೂ ಎಚ್ಚರಿಸಿದರು.

ನಿರಾಣಿ ಬಹಳ ಉಪಕಾರ ಮಾಡಿದ್ದಾರೆ ಎಂದು ಸ್ವಾಮೀಜಿಗಳು ಹೇಳುತ್ತಾರೆ. ಏನು ಉಪಕಾರ ಮಾಡಿದ್ದಾರೆ? ಒಂದಿಷ್ಟು ಹಣ ಕೊಟ್ಟಿರಬೇಕು. ಅದೇ ಉಪಕಾರವೇ? ಎಂದು ಯತ್ನಾಳ್ ಪ್ರಶ್ನಿಸಿದ್ದಾರೆ.

ಕಾವಿಧಾರಿಗಳ ಪರ ಕ್ಷಮೆ ಯಾಚಿಸುತ್ತೇನೆ

ಸಿಎಂ ಸಮ್ಮುಖದಲ್ಲಿ ದಿಂಗಾಲೇಶ್ವರ ಶ್ರೀ ಹೇಳಿಕೆ

ಹಾವೇರಿ, ಜ. 15 - ಹರಿಹರದ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದಲ್ಲಿ ಹರ ಜಾತ್ರೆ ಮಹೋತ್ಸವದ ಸಂದರ್ಭದಲ್ಲಿ ನಡೆದ ಘಟನೆಗಾಗಿ ಕಾವಿಧಾರಿಗಳ ಪರವಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಬಳಿ ಕ್ಷಮೆ ಯಾಚಿಸುವುದಾಗಿ ಬಾಲೇಹೊಸೂರಿನ ದಿಂಗಾಲೇಶ್ವರ ಶ್ರೀಗಳು ಹೇಳಿದ್ದಾರೆ.

ತಾಲ್ಲೂಕಿನ ನರಸೀಪುರದಲ್ಲಿ ಆಯೋಜಿಸಲಾಗಿದ್ದ ನಿಜಶರಣ ಅಂಬಿಗರ ಚೌಡಯ್ಯನವರ 900ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡುತ್ತಾ ಅವರು ಈ ಹೇಳಿಕೆ ನೀಡಿದ್ದಾರೆ. ಈ ಸಂದರ್ಭದಲ್ಲಿ ಮುಖ್ಯಮಂತ್ರಿ ಯಡಿಯೂರಪ್ಪ ವೇದಿಕೆಯ ಮೇಲಿದ್ದರು.

ಸ್ವಾಮಿಗಳನ್ನು ಗುರುಗಳಿಗೆ ಹೋಲಿಸುತ್ತೇನೆ. ಕಾವಿಧಾರಿಗಳಿಗೆ ಸೀಮೆ ಇರುತ್ತದೆ. ನಾವೆಲ್ಲರೂ ಅದನ್ನು ಅರ್ಥ ಮಾಡಿಕೊಳ್ಳಬೇಕು. ನಿನ್ನೆ ಒಂದು ಸಣ್ಣ ಘಟನೆ ನಡೆದಿತ್ತು. ಅವರಿಗೆ ನೋವಾಗಿದ್ದರೆ ಕಾವಿಧಾರಿಗಳ ಪರವಾಗಿ ಕ್ಷಮೆ ಯಾಚಿಸುತ್ತೇನೆ ಎಂದು ಶ್ರೀಗಳು ತಿಳಿಸಿದ್ದಾರೆ.

ಯಡಿಯೂರಪ್ಪನವರು ನಾವೇ ಕರೆ ತಂದಿರುವ ಆಕಳು. ಅವರನ್ನು ರಮಿಸಿ ಹಾಲು ಹಿಂಡಿಕೊಳ್ಳಬೇಕೇ ಹೊರತು, ಬೆದರಿಸಿ ಅಲ್ಲ. ಅದಕ್ಕೆ

6 ಕೋಟಿ ಜನರ ಪ್ರತಿನಿಧಿಯನ್ನು ಬೆದರಿಸುವ ಕೆಲಸವನ್ನು ಯಾವ ಮಠವೂ ಮಾಡಬಾರದು.
- ನಿಡುಮಾಮಿಡಿ ಶ್ರೀ

ಯಾವ ಆಕಳೂ ಸಿದ್ಧವಿರುವುದಿಲ್ಲ ಎಂದರು. ಇವರು ಯಾರು, ಯಾವಾಗ ತಂಬಿಗೆ ತೆಗೆದುಕೊಂಡು ಹೋದರೂ ಒಂದು ತಂಬಿಗೆ ಹಾಲುವ ಕೊಡುವಂತಹ ಭಲೋ ಆಕಳ. ಇಂತಹ ಮುಖ್ಯಮಂತ್ರಿಯಾಗಿರುವ ಅವರನ್ನು ನಾವು ಬಳಕೆ ಮಾಡಿಕೊಳ್ಳಬೇಕು ಎಂದಿದ್ದಾರೆ.

ಈ ಸಂದರ್ಭದಲ್ಲಿ ಮಾತನಾಡಿದ ನಿಡುಮಾಮಿಡಿ ಮಠದ ಚನ್ನಮಲ್ಲ ವೀರಭದ್ರ ಸ್ವಾಮೀಜಿ, ಕೆಲವು ಮಠಾಧೀಶರು ಮುಖ್ಯಮಂತ್ರಿಗೆ ಬೆದರಿಸುವ ತಂತ್ರ ಮಾಡುತ್ತಿದ್ದಾರೆ. ಅವರು ಅದನ್ನು ಮಾಡಬಾರದು ಎಂದಿದ್ದಾರೆ.

6 ಕೋಟಿ ಜನರ ಪ್ರತಿನಿಧಿಯನ್ನು ಬೆದರಿಸುವ ಕೆಲಸವನ್ನು ಯಾವ ಮಠವೂ ಮಾಡಬಾರದು ಎಂದ ಶ್ರೀಗಳು, ಯಡಿಯೂರಪ್ಪನವರು ಬಲಿಷ್ಠರಿಗೆ ಭಾಗಬಾರದು. ಅವರ ಸಾತ್ವಿಕತೆ, ಮೌನ, (4ನೇ ಪುಟಕ್ಕೆ)

ಶುಭ ಕಾರ್ಯಗಳಿಗೆ ವಿಧವೆಯರು ಆರತಿ ಮಾಡಲಿ

ಹರಿಹರದಲ್ಲಿನ ಹರ ಜಾತ್ರೆಯ ಮಹಿಳಾ ಸಮಾವೇಶದಲ್ಲಿ ತರಳಬಾಳು ಜಗದ್ಗುರುಗಳ ಆಗ್ರಹ

ಹರಿಹರ, ಜ.15- ಮಹಿಳೆಯರ ಸ್ಥಾನಮಾನಗಳು ಧಾರ್ಮಿಕವಾಗಿ, ಸಾತ್ವಿಕವಾಗಿ ಎಷ್ಟೇ ಗೌರವಯುತವಾಗಿದ್ದರೂ ವ್ಯವಹಾರಿಕವಾಗಿ ಮಹಿಳೆಯರಿಗೆ ಸಿಗಬೇಕಾದ ಸ್ಥಾನಮಾನಗಳು ಇನ್ನೂ ಸಿಕ್ಕಿಲ್ಲ ಎಂದು ಸಿರಿಗೆರೆ ಬೃಹನ್ಮಠದ ತರಳಬಾಳು ಜಗದ್ಗುರು ಡಾ. ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ ವ್ಯಾಕುಲತೆ ವ್ಯಕ್ತಪಡಿಸಿದರು.

ಅವರು ಬುಧವಾರ ಪಂಚಮಸಾಲಿ ಜಗದ್ಗುರು ಪೀಠದಲ್ಲಿ ಪ್ರಪ್ರಥಮ ಬಾರಿಗೆ ಹಮ್ಮಿಕೊಂಡಿರುವ ಹರ ಜಾತ್ರಾ ಮಹೋತ್ಸವದಲ್ಲಿ ಮಹಿಳಾ ಸಮಾವೇಶದ ದಿವ್ಯಸಾನ್ನಿಧ್ಯ ವಹಿಸಿ ಆಶೀರ್ವಚನ ನೀಡಿದರು.

ಎಲ್ಲಿ ಮಹಿಳೆಯರಿಗೇ ಗೌರವ, ಸಂತೋಷ ಇದೆಯೋ ಅಲ್ಲಿ ದೇವರು ಸಂತೋಷ ಪಡುತ್ತಾನೆಂಬ ಮಾತಿದೆ. ಕೌಟುಂಬಿಕ ಜೀವನದಲ್ಲಿ ಮನೆಯ ಯಜಮಾನನಿಗೆ ಮಹಿಳೆ ಸಲಹೆ ಕೊಟ್ಟರೆ ಜೋರು ಮಾಡುವುದನ್ನು ನಾವು ನೋಡುತ್ತೇವೆ. ಮನೆಯಲ್ಲಿ ಏನಾದರೂ ದುರ್ಘಟನೆಗಳು ನಡೆದರೆ ಮೊನ್ನೆ ಬಂದ ಸೊಸೆ ಕಾರಣ ಎನ್ನುವ ಕೆಟ್ಟ ಮನಸ್ಸು ನಮ್ಮಲ್ಲಿ ಇವೆ. ವಿಧವೆಯನ್ನು ಮಂಗಳ ಕಾರ್ಯದಿಂದ ದೂರ ಇಡುವ ಅನಿಷ್ಠ ಪದ್ಧತಿ ಇನ್ನೂ ಇರುವುದು ಬೇಸರದ ಸಂಗತಿ ಎಂದರು.

ನಿಮ್ಮ ಮಕ್ಕಳ ಮದುವೆಯಲ್ಲಿ ಮಕ್ಕಳಿಗೆ ಒಳ್ಳೆಯದಾಗಲಿ ಎಂಬ ಭಾವನೆಯಿಂದ 5 ಜನ ಮುತ್ತೈದೆಯರಿಂದ ಆರತಿ ಮಾಡುತ್ತೀರಿ, ಅದರ ಬದಲಿಗೆ ವಿಧವೆಯರಿಂದ ಆರತಿ ಮಾಡಿಸಿದರೆ ಅವಳು ಆರತಿ ಮಾಡುವಾಗ ನನಗೆ ಆದ ಅನ್ಯಾಯ ನಿನಗೆ ಆಗದಿರಲೆಂದು ಮನಸಾರೆ ಹಾರೈಸಿ ಆಶೀರ್ವದಿಸುತ್ತಾಳೆ. ಆದ್ದರಿಂದ ಈ ಜಾತ್ರೆ ಮೂಲಕ ನೀವೆಲ್ಲರೂ ಸಂಕಲ್ಪ ಮಾಡಿ ಇನ್ನು ಮುಂದೆ ವಿಧವೆಯರಿಂದ ಶುಭ ಕಾರ್ಯಗಳನ್ನು ಮಾಡಿಸಿ ಎಂದು ಭಕ್ತ ಸಮೂಹಕ್ಕೆ ತರಳಬಾಳು ಜಗದ್ಗುರು ಕರೆ ನೀಡಿದರು.

ಮಹಿಳೆಯರ ಬಗ್ಗೆ ಬಹಳ ಕಾಲದಿಂದಲೂ ಹೆಣ್ಣು, ಹೊನ್ನು, ಮಣ್ಣು ಮಾಯೆ ಎಂಬ ನಿಂದನೆ ಇದೆ, ಆದರೆ ಇವು ಯಾವುವೂ ಮಾಯೆ ಅಲ್ಲ. ನಿನ್ನ ಮನಸ್ಸಿನ ತುಡಿತ ಮಾಯೆ ಎಂದು ಚನ್ನಮಲ್ಲಿಕಾರ್ಜುನ ಹೇಳಿದ ಮಾತನ್ನು ನಾವು ಅರ್ಥ ಮಾಡಿಕೊಂಡು, ಮಕ್ಕಳಿಗೆ ಹೇಗೆ ತಾಯಿಯ ಮೇಲೆ ಹೆಚ್ಚು ಮಮತೆ ಇರುತ್ತದೆಯೋ ಹಾಗೆ ತಾಯಿಯಲ್ಲೂ ಕೂಡಾ ನಿಜವಾದ ಪ್ರೀತಿ ಕಾಣಲು ಸಾಧ್ಯ, ದಡ್ಡ ಶಿಖಾಮಣಿ ಎಡಿಸನ್‌ನ್ನು ದೊಡ್ಡ ವಿಜ್ಞಾನಿಯನ್ನಾಗಿ ಮಾಡಿದವರು ತಾಯಿ ಎಂಬುದನ್ನು ಯಾರೂ ಮರೆಯಬಾರದು. ಆದ್ದರಿಂದ ನಾವೆಲ್ಲರೂ ತಾಯಿಯ ವಾತ್ಸಲ್ಯವನ್ನು ಜೀವನದ ಕೊನೆಯವರೆಗೂ ಕಳೆದುಕೊಳ್ಳಬಾರದೆಂದು ಸ್ವಾಮೀಜಿ ಎಚ್ಚರಿಸಿದರು.

ಸರ್ಕಾರ ಹಾಕಿರುವ ಆರತಿಗೊಬ್ಬ ಮಗಳು, ಕೀರ್ತಿಗೊಬ್ಬ ಮಗ ಎಂಬುದನ್ನು ತೆಗೆಸಿ ಹಾಕಿ, ಆಸ್ತಿಗೊಬ್ಬ ಮಗ, ಆಸರೆಗೊಬ್ಬ ಮಗಳು ಎಂದು ಬರೆಸಿ ಎಂದು ವೇದಿಕೆಯಲ್ಲಿದ್ದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರಿಗೆ ಸೂಚಿಸಿದ ತರಳಬಾಳು ಶ್ರೀಗಳು, ಆಗಸದಲ್ಲಿ ಸೂರ್ಯ ಮಕರ ರಾಶಿಗೆ ಪ್ರವೇಶ ಮಾಡುವ ಹಾಗೆ ಸಮಸ್ತ ಶಿಷ್ಯ ಸಮುದಾಯ ಪಂಚಮಸಾಲಿ ಪೀಠವನ್ನು ಪ್ರವೇಶ ಮಾಡಿರುವುದು ಸಂತೋಷ ತಂದಿದೆ. ಸಿರಿಗೆರೆ ಮತ್ತು ಈ ಪೀಠದ ಭಕ್ತರು ಸೌಹಾರ್ದದಿಂದ ಜೀವನ ನಡೆಸಿ ಎಂದು ಆಶಿಸಿದರು.

ಮಹಿಳಾ ಸಮಾವೇಶವನ್ನು ಉದ್ಘಾಟಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಶಶಿಕಲಾ ಜೊಲ್ಲೆ ಮಾತನಾಡಿ, ಹೆಣ್ಣು ಮಕ್ಕಳು ಬೇಡ ಎಂಬ ಭಾವನೆ ಗ್ರಾಮೀಣ ಪ್ರದೇಶದಲ್ಲಿ ಈಗಲೂ ಇರುವುದು ಆಶ್ಚರ್ಯ ತಂದಿದೆ. ಸಾಧನೆ ಮಾಡಿದ ಎಲ್ಲಾ ಮಹಿಳೆಯರು ಹೆಣ್ಣು ಮಕ್ಕಳು ಎಂಬುದನ್ನು ಯಾರೂ ಮರೆಯಬಾರದು. ಭಾರತೀಯ ಸಂಸ್ಕೃತಿಯಲ್ಲಿ ನಮ್ಮ (4ನೇ ಪುಟಕ್ಕೆ)

ನಂದಿಗುಡಿ ಮಠದ ಆಸ್ತಿ ವರ್ಗಾಯಿಸಲು ಬದ್ಧ

ನಂದೀಶ್ವರ ಸ್ವಾಮೀಜಿ ಸ್ಪಷ್ಟನೆ

ಸಾಗರ, ಜ. 15- ದಾವಣಗೆರೆ ಜಿಲ್ಲೆ ಹರಿಹರ ತಾಲ್ಲೂಕಿನ ನಂದಿಗುಡಿ ಬೃಹನ್ಮಠಕ್ಕೂ ನನಗೂ ಈಗ ಯಾವುದೇ ಸಂಬಂಧವಿಲ್ಲ. ಮಠದ ಆಸ್ತಿಯನ್ನಾಗಲೀ, ಹಣವನ್ನಾಗಲೀ ನಾನು ಇರಿಸಿಕೊಂಡಿಲ್ಲ. ನಾನು ಪೀಠತ್ಯಾಗ ಮಾಡುವಾಗ ಎಲ್ಲವನ್ನೂ ಜಿಪಿಎ ಮೂಲಕ ಶ್ರೀಮಠಕ್ಕೆ ವಹಿಸಿಕೊಟ್ಟು ಬಂದಿದ್ದೇನೆ ಎಂದು ನಂದಿಗುಡಿ ಬೃಹನ್ಮಠದ ಮಾಜಿ ಪೀಠಾಧ್ಯಕ್ಷ ನಂದೀಶ್ವರ ಸ್ವಾಮೀಜಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಈಚೆಗೆ ಮಾತನಾಡಿ, 2006ರಲ್ಲಿ ವೈಯಕ್ತಿಕ ಕಾರಣಕ್ಕಾಗಿ ನಾನು ಪೀಠತ್ಯಾಗ ಮಾಡಿದ್ದೇನೆ. ಶ್ರೀಮಠದಿಂದ ಬರುವಾಗ ಮಠದ ಭಕ್ತರು ಹಾಗೂ ಸಮಾಜದವರ ಒಪ್ಪಿಗೆ ಮೇರೆಗೆ ಅತ್ತಿಕಟ್ಟಿ (7ನೇ ಪುಟಕ್ಕೆ)

ಎನ್.ಪಿ.ಆರ್.ಗೆ ದಾಖಲೆ, ಬಯೋಮೆಟ್ರಿಕ್ ಪಡೆಯುವುದಿಲ್ಲ : ಕೇಂದ್ರ

ನವದೆಹಲಿ, ಜ. 15 - ರಾಷ್ಟ್ರೀಯ ಜನಸಂಖ್ಯಾ ನೋಂದಣಿ (ಎನ್.ಪಿ.ಆರ್.) ಕೈಗೊಳ್ಳುವಾಗ ಯಾವುದೇ ದಾಖಲೆ ಇಲ್ಲವೇ ಬಯೋಮೆಟ್ರಿಕ್ ವಿವರ ಪಡೆದುಕೊಳ್ಳುವುದಿಲ್ಲ ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಪಶ್ಚಿಮ ಬಂಗಾಳ ಸೇರಿದಂತೆ ಹಲವು ರಾಜ್ಯಗಳು ಕಳವಳ ವ್ಯಕ್ತಪಡಿಸಿದ ಹಿನ್ನೆಲೆಯಲ್ಲಿ ಈ ವಿವರ ನೀಡಲಾಗಿದೆ.

ಎನ್.ಪಿ.ಆರ್. ಪ್ರಕ್ರಿಯೆಯಲ್ಲಿ ಕೇಳಲಾಗುವ ಪ್ರಶ್ನೆಗಳ ಪಟ್ಟಿಯನ್ನು ಶೀಘ್ರದಲ್ಲೇ (4ನೇ ಪುಟಕ್ಕೆ)

ಆಶ್ರಯ ಬಯಸುವವರಿಗೆ ಅಭಯ ಭಾರತೀಯರ ಔದಾರ್ಯ: ಯಡಿಯೂರಪ್ಪ

ಹರಿಹರ, ಜ. 15 - ಆಶ್ರಯ ಬಯಸುವವರಿಗೆ ಅಭಯ ನೀಡಿ ಅಭ್ಯುದಯದ ಮಾರ್ಗ ತೋರುವ ಔದಾರ್ಯ ಭಾರತೀಯರಿಗೆ ಪೀಳಿಗೆಗಳಿಂದ ಬಂದಿದೆ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಹರಿಹರದ ಆರೋಗ್ಯ ಮಾತೆಯ ಕಿರು ಬೆಸಿಲಿಕ ಸಂಭ್ರಮಿಕ ಘೋಷಣೆ ಹಾಗೂ ಸಮರ್ಪಣೆಯ ಕಾರ್ಯಕ್ರಮದಲ್ಲಿ ಘೋಷಣೆಯ ಫಲಕವನ್ನು ಅನಾವರಗೊಳಿಸಿದ ನಂತರ ಮುಖ್ಯ ಅತಿಥಿಯಾಗಿ ಅವರು ಮಾತನಾಡುತ್ತಿದ್ದರು.

ಪಾಶ್ಚಾತ್ಯದಲ್ಲಿ ಧಾರ್ಮಿಕ ದೌರ್ಜನ್ಯಕ್ಕೆ ಒಳಗಾದ ಫಾರ್ಸಿಗಳು ಸಹಸ್ರಾರು ವರ್ಷಗಳ ಹಿಂದೆ ಭಾರತಕ್ಕೆ ಬಂದಿದ್ದರು. ಇದೇ ಮಣ್ಣಿನಲ್ಲಿ ಅವರ ಧಾರ್ಮಿಕ, ಸಾಮಾಜಿಕ ಹಾಗೂ ಆರ್ಥಿಕ ಔನ್ನತ್ಯಕ್ಕೆ ತಲುಪಿರುವುದು ಇತಿಹಾಸ ದಾಖಲಿಸಿದೆ ಎಂದವರು ಹೇಳಿದರು.

ಇದೇ ರೀತಿ ಕ್ರೈಸ್ತರೂ ಕೂಡ ಜೀಸಸ್ ಕ್ರೈಸ್ತ ತರುವಾಯ ಭಾರತಕ್ಕೆ ಬಂದು ನೆಲೆಗೊಂಡರು. ಅವರನ್ನು ಭಾರತೀಯರು ಔದಾರ್ಯದಿಂದ ಬರಮಾಡಿಕೊಂಡಿದ್ದಾರೆ. ಕ್ರೈಸ್ತರು ಇಲ್ಲಿಯೇ

ಹರಿಹರದ ಮಾತೆ ಮೇರಿ ದೇವಾಲಯವನ್ನು ಕಿರು ಬೆಸಿಲಿಕ ಎಂದು ಘೋಷಣೆ

ನೆಲೆಗೊಂಡು ಅಭ್ಯುದಯ ಸಾಧಿಸಿದ್ದಾರೆ ಎಂದು ಯಡಿಯೂರಪ್ಪ ತಿಳಿಸಿದರು.

ಯಾವುದೇ ವ್ಯಕ್ತಿ ಹಾಗೂ ಸಮುದಾಯ ತಾನು ನೆಲೆ ನಿಂತ ಕಡೆ ಸ್ಥಳೀಯರ ಜೊತೆ ಹೊಂದಿಕೊಂಡು ಸೌಹಾರ್ದದಿಂದ ಇದ್ದಾಗ ಶಾಂತಿ, ಸಹನೆ ಮತ್ತು ನೆಮ್ಮದಿ ನೆಲೆಗೊಳ್ಳುತ್ತದೆ. ಕ್ರೈಸ್ತ ಅನುಯಾಯಿಗಳು ಈ ತತ್ವ ಅನುಸರಿಸುತ್ತಿರುವುದು ಶ್ಲಾಘನೀಯ. ಕ್ರೈಸ್ತರು ಶಿಕ್ಷಣ, ಆರೋಗ್ಯ ಹಾಗೂ ಸಮಾಜ ಸೇವೆ ಮೂರೂ ಕ್ಷೇತ್ರಗಳಲ್ಲಿ ನೀಡಿದ ಕೊಡುಗೆ (4ನೇ ಪುಟಕ್ಕೆ)

ಜಾತಿ ಪ್ರೀತಿ ಅಧಿಕವಾಗುತ್ತಿದೆ

ಕ್ರಿಶ್ಚಿಯನ್ನರು ಅಲ್ಪಸಂಖ್ಯಾತರಾದರೂ ಸಮಸ್ತ ಜನರಿಗೆ ಸೇವೆ ಸಲ್ಲಿಸುತ್ತಿದ್ದೇವೆ. ನಾವು ಈ ದೇಶದ ಪ್ರಜೆಗಳು, ನಮ್ಮ ಹಕ್ಕನ್ನು ಸರ್ಕಾರ ಒದಗಿಸಿಕೊಡಬೇಕು ಎಂದು ಬೆಂಗಳೂರು ವಲಯದ ಮಹಾಧರ್ಮಾಧ್ಯಕ್ಷ ಡಾ. ಪೀಟರ್ ಮಚಡೋ ಮನವಿ ಮಾಡಿಕೊಂಡಿದ್ದಾರೆ.

ಏಸು ಪ್ರತಿಮೆ, ದೇವಾಲಯಗಳನ್ನು ನಿರ್ಮಿಸಲು ಭಕ್ತಿ ಪಾಲಿಸಲು ಅವಕಾಶ ಕೊಡುವಂತೆ ಸರ್ಕಾರ ಹಾಗೂ ಜನರ ಬಳಿ ಕೇಳುತ್ತೇವೆ. ರಾಷ್ಟ್ರಕ್ಕೆ ನಾವು ಸೇವೆ ಸಲ್ಲಿಸುವಾಗ ಸರ್ಕಾರ ಹಾಗೂ ಸರ್ಕಾರೇತರರು ಸಹಕರಿಸಬೇಕು ಎಂದು ಕರೆ ನೀಡಿದ್ದಾರೆ.

ಪ್ರತಿಮೆ, ದೇವಾಲಯ ನಿರ್ಮಿಸಲು ಅವಕಾಶ ಕೊಡಿ

ಜಾತಿಯ ಪ್ರೀತಿ ಸೀಮಿತ ಹಾಗೂ ಸಂಕುಚಿತವಾಗಿದೆ. ಅದು ತನ್ನ ಜಾತಿಯವರನ್ನು ಮಾತ್ರ ಪ್ರೀತಿಸು ಎನ್ನುತ್ತದೆ. ಇಂದು ಜಾತಿ ಪ್ರೀತಿ ಅಧಿಕವಾಗುತ್ತಿದೆ ಎಂದು ಚಿತ್ರದುರ್ಗ ಮುರುಘಾ ಮಠದ ಡಾ. ಶ್ರೀ ಶಿವಮೂರ್ತಿ ಶರಣರು ವಿಷಾದಿಸಿದ್ದಾರೆ.

ಮಾನವ ಪ್ರೀತಿ ಹಾಗೂ ಸಕಲ ಜೀವಗಳನ್ನು ಪ್ರೀತಿಸುವುದೇ ವಿಶಾಲ ಮನೋಭಾವ. ಏಸು ಕ್ರಿಸ್ತರಲ್ಲಿ ಅಂತಹ ಅಚಲ - ಅಖಂಡ ಪ್ರೀತಿ ಇತ್ತು ಎಂದವರು ಅಭಿಪ್ರಾಯ ಪಟ್ಟರು. ಜೆರುಸಲೇಂ ಹಾಗೂ ವ್ಯಾಟಿಕಾನ್‌ಗಳಿಗೆ ಭೇಟಿ ನೀಡಿದ್ದನ್ನು ನೆನಪಿಸಿಕೊಂಡ ಅವರು, ಹಿಂದಿನ ಪೋಪರಿಗೆ ಏಸುವಾಣಿ ಹಾಗೂ ಬಸವ ವಚನ ಇರುವ ಫಲಕವನ್ನು ಕೊಡುಗೆಯಾಗಿ ಕಳಿಸಿದ್ದಾಗಿ ಹೇಳಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿ ಎನ್ನುವುದು ಸುಳ್ಳು: ಡಿಕೆಶಿ

ದಾವಣಗೆರೆ, ಜ.15- ನಾನು ಕೆಪಿಸಿಸಿ ಅಧ್ಯಕ್ಷ ಸ್ಥಾನಕ್ಕೆ ಆಕಾಂಕ್ಷಿ ಎನ್ನುವುದು ಸುಳ್ಳು. ನನ್ನ ಹೆಸರು ಪ್ರಸ್ತಾಪ ಇಲ್ಲ. ಅಧ್ಯಕ್ಷನಾಗಲು ಯಾವುದೇ ರೀತಿಯಲ್ಲೂ ಪ್ರಯತ್ನ ಪಟ್ಟಿಲ್ಲ ಎಂದು ಮಾಜಿ ಸಚಿವ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಹರಿಹರದಲ್ಲಿನ ಹರ ಜಾತ್ರೆಯಲ್ಲಿ ಪಾಲ್ಗೊಳ್ಳಲು ಬೆಂಗಳೂರಿನಿಂದ ಹರಿಹರಕ್ಕೆ ಇಂದು ಮಧ್ಯಾಹ್ನ ತಮ್ಮ ವಾಹನದಲ್ಲಿ ತೆರಳುವ ಮಾರ್ಗ ಮಧ್ಯೆ ನಗರದ ರಾಷ್ಟ್ರೀಯ ಹೆದ್ದಾರಿಯಲ್ಲಿನ ಅಪೂರ್ವ ರೆಸಾರ್ಟ್ ಬಳಿ ತಮ್ಮನ್ನು ಭೇಟಿಯಾದ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

ಕೆಪಿಸಿಸಿ ಅಧ್ಯಕ್ಷ ಸ್ಥಾನದ ಆಕಾಂಕ್ಷೆ ವಿಚಾರವಾಗಿ ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸುತ್ತಾ, ನಾನು ಯಾವುದೇ ಸ್ಥಾನದ ಆಕಾಂಕ್ಷಿ ಅಲ್ಲ. ನನ್ನ ಹೆಸರು ಎಲ್ಲೂ ಪ್ರಸ್ತಾಪವಾಗಿಲ್ಲ. ಜನರ ಮಧ್ಯೆ ಇದ್ದು ಕೆಲಸ ಮಾಡುತ್ತೇನೆ ಅಷ್ಟೆ ಎಂದು ತಿಳಿಸಿದರು.

ಇನ್ನೂ ಒಂದು ಕಡೆ ಯೇಸು ಪ್ರತಿಮೆಗೆ ವಿರೋಧಿಸುವ ಬಿಜೆಪಿಯು ಇತ್ತ ಸಿಎಂ ಯಡಿಯೂರಪ್ಪ ಹರಿಹರದಲ್ಲಿ ಚರ್ಚ್ ಗೆ ಭೇಟಿ ನೀಡಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿದ ಡಿಕೆಶಿ, ಅವರವರ ನೀತಿ, ಧರ್ಮ, ಪಾರ್ಟಿ, ಅವರ ಓಟಿನ ವಿಚಾರ ಅವರು ಏನು ಬೇಕಾದರೂ ಮಾಡಿಕೊಳ್ಳಲಿ. ನಾವು ಯಾಕೆ ತಲೆ ಕೆಡಿಸಿಕೊಳ್ಳಬೇಕು. ನಾನು ಯಾವತ್ತು ಓಟ್ ಬ್ಯಾಂಕ್ ರಾಜಕಾರಣ ಮಾಡೋಲ್ಲ. ನಮಗೆ ಎಲ್ಲಾ ಧರ್ಮದ ಜನ ಬೇಕು, ನಮ್ಮ ತಾಲ್ಲೂಕಿನ ಒಬ್ಬರು ಪ್ರತಿಮೆ ಮಾಡ್ತಿದ್ದಾರೆ, ನಾನು ಕ್ಷೇತ್ರದ ಶಾಸಕನಾಗಿ ನನ್ನ ಡ್ಯೂಟಿ ನಾನು ಮಾಡುತ್ತೀನಿ ಎಂದು ಹೇಳಿದರು.

ಡಿಕೆಶಿಗೆ ಭವ್ಯ ಸ್ವಾಗತ: ಅಪೂರ್ವ ರೆಸಾರ್ಟ್ ಬಳಿ ಡಿ.ಕೆ. ಶಿವಕುಮಾರ್ ಆಗಮಿಸುತ್ತಿದ್ದಂತೆ ಕಾಂಗ್ರೆಸ್ ಮುಖಂಡರು, ಎನ್ ಎಸ್ ಯುಐ ಕಾರ್ಯಕರ್ತರು ಹಾಗೂ ಡಿಕೆಶಿ ಅಭಿಮಾನಿಗಳು ಮತ್ತು ಬೆಂಬಲಿಗರು ಅವರಿಗೆ ಬೃಹತ್ ಹೂಮಾಲೆ, ಹೂಗುಚ್ಛ ನೀಡಿ ಭವ್ಯವಾಗಿ ಸ್ವಾಗತಿಸಿದರು.

ಈ ವೇಳೆ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ವೈ. ರಾಮಪ್ಪ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಹೆಚ್.ಬಿ. ಮಂಜಪ್ಪ ಮತ್ತಿತರರು ಸ್ವಾಗತಿಸಿದರು.

ಬಯೋಮೆಟ್ರಿಕ್ ಪಡೆಯುವುದಿಲ್ಲ

(3ನೇ ಪುಟದಿಂದ) ಅಂತಿಮಗೊಳಿಸಲಾಗುವುದು ಎಂದು ಕೇಂದ್ರ ಗೃಹ ಇಲಾಖೆ ಅಧಿಕಾರಿಗಳು ಹೇಳಿದ್ದಾರೆ.

ಈ ಪ್ರಕ್ರಿಯೆ ಸಂದರ್ಭದಲ್ಲಿ ಯಾವುದೇ ದಾಖಲೆ ಇಲ್ಲವೇ ಬಯೋಮೆಟ್ರಿಕ್ ವಿವರ ಕೇಳುವುದಿಲ್ಲ ಎಂದು ಅಧಿಕಾರಿಗಳು ಹೇಳಿದ್ದಾರೆ. ಆದರೆ, ಜನಗಣತಿ ಮುಖ್ಯಸ್ಥರ ಅಧಿಕೃತ ವೆಬ್ ತಾಣದಲ್ಲಿ ಬಯೋಮೆಟ್ರಿಕ್ ವಿವರ ಪಡೆಯುವ ಮಾಹಿತಿ ಇದೆ.

ಈ ನಡುವೆ, ಪಶ್ಚಿಮ ಬಂಗಾಳ ಹಾಗೂ ಕೇರಳಗಳು ಎನ್.ಪಿ.ಆರ್. ಕುರಿತ ಪ್ರಕ್ರಿಯೆಗಳನ್ನು ತಡೆ ಹಿಡಿದಿವೆ. ದೇಶದಲ್ಲಿರುವ ಜನರ ಮಾಹಿತಿಯನ್ನು ಎನ್.ಪಿ.ಆರ್. ಮೂಲಕ ಪಡೆಯಲಾಗುತ್ತದೆ. ಈ ಹಿಂದೆ 2010ರಲ್ಲಿ ಎನ್.ಪಿ.ಆರ್. ಕೈಗೊಳ್ಳಲಾಗಿತ್ತು.

3 ರಂದು ತಾ.ಪಂ. ಸಭೆ

ದಾವಣಗೆರೆ, ಜ. 15- ದಾವಣಗೆರೆ ತಾಲ್ಲೂಕು ಪಂಚಾಯ್ತಿಯ ಸಾಮಾನ್ಯ ಸಭೆಯನ್ನು ಫೆಬ್ರವರಿ 3 ರಂದು ಬೆಳಿಗ್ಗೆ 11 ಗಂಟೆಗೆ ತಾಲ್ಲೂಕು ಪಂಚಾಯ್ತಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ.

ಸಣ್ಣ ಉದ್ಯಮಗಳ ಆನ್‌ಲೈನ್ ಹೂಡಿಕೆ 10 ಶತಕೋಟಿ ಡಾಲರ್ ಸರಕು ರಫ್ತು

ಅಮೆಜಾನ್

ನವದೆಹಲಿ, ಜ. 15 – ಸಣ್ಣ ಉದ್ಯಮಗಳನ್ನು ಆನ್‌ಲೈನ್‌ಗೆ ತರಲು ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಹಾಗೂ 2025ರ ವೇಳೆಗೆ ಭಾರತದಲ್ಲಿ ನಿರ್ಮಿಸಲಾದ 10 ಶತಕೋಟಿ ಡಾಲರ್ ಮೌಲ್ಯದ ಸರಕುಗಳನ್ನು ರಫ್ತು ಮಾಡುವುದಾಗಿ ಅಮೆಜಾನ್ ಆನ್‌ಲೈನ್ ಕಂಪನಿಯ ಮುಖ್ಯಸ್ಥ ಜೆಫ್ ಬೆಜೋಸ್ ಘೋಷಿಸಿದ್ದಾರೆ.

ಭಾರತದಲ್ಲಿ 5.5 ಶತಕೋಟಿ ಡಾಲರ್ ಹೂಡಿಕೆ ಮಾಡುವುದಾಗಿ ಅಮೆಜಾನ್ ಈ ಹಿಂದೆ ಘೋಷಿಸಿತ್ತು. ಅಮೆರಿಕ ನಂತರ ಭಾರತ ಪ್ರಮುಖ ಮಾರುಕಟ್ಟೆ ಮಾಡಿಕೊಳ್ಳಲು ಅಮೆಜಾನ್ ಉದ್ದೇಶಿಸಿದೆ.

ಭಾರತವನ್ನು ದೀರ್ಘಾವಧಿ ಸಹಭಾಗಿ ಮಾಡಿಕೊಳ್ಳಲು ನಾವು ಬದ್ಧರಾಗಿದ್ದೇವೆ. ನಮ್ಮ ಕ್ರಮಗಳು, ನಮ್ಮ ಮಾತುಗಳಿಗಿಂತ ಸ್ಪಷ್ಟ ಸಂದೇಶ ನೀಡುತ್ತಿವೆ ಎಂದವರು ಹೇಳಿದ್ದಾರೆ.

ಮುಂದಿನ ಐದು ವರ್ಷಗಳಲ್ಲಿ ಅಮೆಜಾನ್ ಭಾರತದಲ್ಲಿ 1 ಶತಕೋಟಿ ಡಾಲರ್ ಹೂಡಿಕೆ ಮಾಡಿ ದೇಶಾದ್ಯಂತ ಇರುವ ಸಣ್ಣ ಹಾಗೂ ಅತಿ ಸಣ್ಣ ಉದ್ಯಮಗಳನ್ನು ಆನ್‌ಲೈನ್‌ಗೆ ತರುತ್ತೇವೆ. ಇದು 2025ರ ವೇಳೆಗೆ ಭಾರತದಿಂದ 10 ಶತಕೋಟಿ ಡಾಲರ್ ಮೌಲ್ಯದ ಸರಕು ರಫ್ತು ಮಾಡುವ ಗುರಿಗೆ ನೆರವಾಗಲಿದೆ ಎಂದವರು ಹೇಳಿದ್ದಾರೆ.

ಭಾರತದ ಸಮೃದ್ಧತೆಯಲ್ಲಿ ಹೆಚ್ಚು ಜನರು ಭಾಗಿಯಾಗುವಂತೆ ಮಾಡುವುದು ನಮ್ಮ ಉದ್ದೇಶ. ಈ ದಿಸೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರಣದಿಂದಾಗಿ ಘೋಷಣೆ ಮಾಡುತ್ತಿದ್ದೇವೆ. ಯಾವುದಾದರೂ ಫಲ ನೀಡುತ್ತಿದ್ದರೆ, ಆ ದಿಸೆಯಲ್ಲಿ ಪ್ರಯತ್ನ ದುಪ್ಪಟ್ಟು ಮಾಡಬೇಕು ಎಂದೂ ಬೆಜೋಸ್ ತಿಳಿಸಿದ್ದಾರೆ.

ಈ ಕ್ರಮದಿಂದ ಲಕ್ಷಾಂತರ ಜನರು ಭಾರತದ ಭವಿಷ್ಯದ ಸಮೃದ್ಧಿಯಲ್ಲಿ ಭಾಗಿಯಾಗಲಿದ್ದಾರೆ. ಇದು ವಿಶ್ವವನ್ನು 'ಮೇಕ್ ಇನ್ ಇಂಡಿಯಾ' ಉತ್ಪನ್ನಗಳಿಗೆ ತೆರವುಗೊಳ್ಳುವಂತೆ ಮಾಡಲಿದೆ ಎಂದವರು ಹೇಳಿದ್ದಾರೆ.

ಮಂಗಳವಾರದಿಂದ ಬೆಜೋಸ್ ಭಾರತದ ಮೂರು ದಿನಗಳ ಭೇಟಿ ಆರಂಭಿಸಿದ್ದಾರೆ. ಅವರು ರಾಜಘಾಟ್‌ನಲ್ಲಿರುವ ಮಹಾತ್ಮ ಗಾಂಧೀಜಿ ಸಮಾಧಿಗೆ ತೆರಳಿ ನಮಿಸಿದರು.

ಭೇಟಿಯ ವೇಳೆ ಬೆಜೋಸ್ ಅವರು ಸರ್ಕಾರದ ಉನ್ನತ ಅಧಿಕಾರಿಗಳು ಹಾಗೂ ಔದ್ಯಮಿಕ ನಾಯಕರನ್ನು ಭೇಟಿ ಮಾಡುವ ನಿರೀಕ್ಷೆ ಇದೆ.

ಅವರ ಭೇಟಿಯ ವೇಳೆಯೇ ಅಮೆಜಾನ್ ಹಾಗೂ ಫ್ಲಿಪ್‌ಕಾರ್ಟ್‌ಗಳ ವ್ಯಾಪಾರಿ ಪದ್ಧತಿಗಳ ಕುರಿತು ಸಿ.ಸಿ.ಐ. ನೋಟಿಸ್‌ಗಳನ್ನು ಕಳಿಸಿದೆ. ಎರಡೂ ಕಂಪನಿಗಳ ವಹಿವಾಟು ರೀತಿಗೆ ಸಣ್ಣ ಅಂಗಡಿಗಳು ಆಕ್ಷೇಪ ವ್ಯಕ್ತಪಡಿಸಿ ದೂರು ದಾಖಲಿಸಿದ್ದವು.

ಕೇಂದ್ರ ಸರ್ಕಾರ ಕಳೆದ ವರ್ಷ ಆನ್‌ಲೈನ್ ಮೂಲಕ ನಡೆಸುವ ವಹಿವಾಟುಗಳ ಕುರಿತ ನಿಯಮಗಳನ್ನು ಕಠಿಣಗೊಳಿಸಿತ್ತು. ಆನ್‌ಲೈನ್ ಮಾರಾಟ ಕಂಪನಿಗಳು ತಮಗಾಗಿಯೇ ವಿಶಿಷ್ಟ ಮಾರಾಟ ವ್ಯವಸ್ಥೆ ಮಾಡಿಕೊಳ್ಳುವುದರ ಮೇಲೆ ನಿರ್ಬಂಧ ಹೇರಿತ್ತು. ನಂತರ ಅಮೆಜಾನ್ ಜಂಟಿ ಉದ್ಯಮಗಳ ಸ್ಥಾಪನೆಗೆ ಕ್ರಮ ತೆಗೆದುಕೊಂಡಿತ್ತು.

ವಿಧವೆಯರು ಆರತಿ ಮಾಡಲಿ

(3ನೇ ಪುಟದಿಂದ) ಸಂಸ್ಕೃತಿ ಉಳಿದಿರುವುದು ಹೆಣ್ಣು ಮಕ್ಕಳಿಂದ ಎಂದರು.

ಚಿತ್ರನಟಿ ರಾಗಿಣಿ ದ್ವಿವೇದಿ ಮಾತನಾಡಿ, ಮಹಿಳೆಯರ ಜವಾಬ್ದಾರಿ ಪುರುಷರಿಗಿಂತ ಹೆಚ್ಚಿರುತ್ತದೆ. ಮಹಿಳೆಯನ್ನು ಗೌರವದಿಂದ ಕಾಣಬೇಕು ಎಂದರು.

ಬೀದರ್‌ನ ಬಸವಗಿರಿಯ ಬಸವ ಸೇವಾ ಪ್ರತಿಷ್ಠಾನದ ಅಕ್ಕ ಅನ್ನಪೂರ್ಣ ಮಾತನಾಡಿ, ಮಹಿಳೆಯರು ಅನಾವಶ್ಯಕವಾಗಿ ಇನ್ನೊಬ್ಬರ ಬಗ್ಗೆ ಮಾತನಾಡಿಕೊಳ್ಳುವುದನ್ನು ಮೊದಲು ನಿಲ್ಲಿಸಬೇಕು. ಏಕೆಂದರೆ ನಾವಾಡುವ ಮಾತುಗಳಿಂದ ಮನನೊಂದು ಮಹಿಳೆಯರು ಆತ್ಮಹತ್ಯೆ ಮಾಡಿಕೊಂಡಿರುವ ಉದಾಹರಣೆಗಳನ್ನು ನಾವು ನೋಡಿದ್ದೇವೆ ಎಂದರು.

ಸಾನ್ನಿಧ್ಯ ವಹಿಸಿದ್ದ ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಮಾತನಾಡಿ, ಜಾತ್ರೆ ಎಂದರೆ ಬರೀ ಸಂತೋಷಕ್ಕಾಗಿ ಅಲ್ಲ, ಸಮುದಾಯದ ಜನಜಾಗೃತಿಗಾಗಿ ಎಂಬುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು. ಇದುವರೆಗೂ ಅಸಂಘಟಿತ ನಮ್ಮೆಲ್ಲಾ ಸಮಾಜಗಳನ್ನು ಅಡಿಪಾಯ ಮಾಡಿಕೊಂಡು ಬೇರೆಯವರು ಬೆಳೆದಿದ್ದಾರೆ. ನಾವು ಇನ್ನು ಮುಂದೆ ಸಂಘಟಿತರಾಗಿ ನಮ್ಮ ಹಕ್ಕುಗಳನ್ನು ಪಡೆದುಕೊಳ್ಳಬೇಕು. ಈ ನಿಟ್ಟಿನಲ್ಲಿ ಪಂಚಮಸಾಲಿ ಪೀಠಕ್ಕೆ ನಮ್ಮ ಬೆಂಬಲವಿದೆ. ನಾವು ಹರಿ ಉಪಾಸಕರಾದರೆ, ನೀವು ಹರನ ಉಪಾಸಕರು, ನಿಮ್ಮ ಜೊತೆ ವಾಲ್ಮೀಕಿ ಗುರುಪೀಠ ಇರುತ್ತದೆ. ನಾವು ಮತ್ತು ವಚನಾನಂದ ಶ್ರೀಗಳು ಬಹಳ ವರ್ಷಗಳ ಗೆಳೆಯರಾಗಿದ್ದು, ಇದೀಗ ಅಕ್ಕ-ಪಕ್ಕ ಮಠಗಳಲ್ಲಿ ಇದ್ದೇವೆ. ಇಲ್ಲಿರುವ ನಾವೆಲ್ಲರೂ ಒಂದಾಗಿ ಹೋಗೋಣ ಎಂದು ವಾಲ್ಮೀಕಿ ಶ್ರೀಗಳು ಕರೆ ನೀಡಿದರು.

ದಿವ್ಯನೇತೃತ್ವ ವಹಿಸಿದ್ದ ಶ್ರೀ ವಚನಾನದ ಸ್ವಾಮೀಜಿ ಮಾತನಾಡಿ, ಪಂಚಮಸಾಲಿ ಸಮಾಜದ ನೊಂದ ಮನಸ್ಸುಗಳಿಗೆ ಔಷಧಿಯಾಗಿ ಭಗವಂತ ನಮ್ಮನ್ನು ಈ ಪೀಠಕ್ಕೆ ಕಳುಹಿಸಿದ್ದಾನೆ. ನಾನು ಯೊಗ ಗುರುವಾಗಿ ಆಕಾಶದಲ್ಲಿ ಹಾರಬಲ್ಲೆ. ಸಮಾಜದ ಗುರುವಾಗಿ ನೆಲದಲ್ಲಿ ನಿಮ್ಮ ಜೊತೆ ನಡೆಯುವುದನ್ನೂ ಬಲ್ಲೆ ಎಂದರು. ಯೊಗ ಮುಕ್ತ-ರೋಗ ಮುಕ್ತ ಸಮಾಜ ನಿರ್ಮಾಣ ನನ್ನ ಕನಸು. ಈ ಜಾತ್ರೆ ಇವತ್ತು ಮುಗಿಯುತ್ತದೆ. ಆದರೆ ನಮ್ಮ ಸಂಘಟನೆಯ ಜಾತ್ರೆಯ 365 ದಿನವೂ ಇರುತ್ತದೆ. ನೀವು ಕರೆದಾಗ ನಿಮ್ಮ ಜೊತೆ ನಾವಿರುತ್ತೇವೆ ಎಂದು ಸ್ವಾಮೀಜಿ ಸಮಾಜಕ್ಕೆ ಅಭಯ ನೀಡಿದರು.

ರಾಜ್ಯ ವೀರಶೈವ ಲಿಂಗಾಯತ ಪಂಚಮಸಾಲಿ ಮಹಿಳಾ ಘಟಕದ ಅಧ್ಯಕ್ಷೆ ನಾಗರತ್ನಮ್ಮ ಬಾವಿಕಟ್ಟೆ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಶ್ರೀಮತಿ ವಸಂತ ಹುಲ್ಲತ್ತಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ವಿಧಾನ ಪರಿಷತ್ ಸದಸ್ಯ ಹನುಮಂತ ನಿರಾಣಿ, ಶಾಸಕರಾದ ಪಿ.ಟಿ. ಪರಮೇಶ್ವರ ನಾಯ್ಕ, ಅರುಣ್ ಕುಮಾರ್ ಪೂಜಾರ್, ಮಾಜಿ ಶಾಸಕ ಮಹಿಮಾ ಪಟೇಲ್, ವಿಜಯಪುರ ಡಿಸಿಸಿ ಬ್ಯಾಂಕಿನ ನಿರ್ದೇಶಕಿ ಸಂಯುಕ್ತ ಶಿವಾನಂದ ಪಾಟೀಲ್, ಡಾ. ಶಶಿಕಲಾ ಕೃಷ್ಣಮೂರ್ತಿ, ಕಂಚಿಕೇರಿ ಸುಶೀಲಮ್ಮ, ಹಾವೇರಿಯ ಡಾ. ಉಷಾ ವೀರಾಪುರ, ರಾಜೇಶ್ವರಿ ಪಾಟೀಲ್, ಮುಖಂಡರಾದ ಬಾವಿ ಬೆಟ್ಟಪ್ಪ, ಬಸವರಾಜ ದಿಂಡೂರು, ಬಿ.ಸಿ. ಉಮಾಪತಿ, ಜಾತ್ರಾ ಸಮಿತಿ ಅಧ್ಯಕ್ಷ ಸಿ.ಆರ್. ಬಳ್ಳಾರಿ, ಚಂದ್ರಶೇಖರ್ ಪೂಜಾರ್, ಸಿರಿಗೆರೆ ನಾಗನಗೌಡ್ರು, ಜಿ.ಪಂ. ಸದಸ್ಯ ಬೆಣ್ಣೆಹಳ್ಳಿ ಹಾಲೇಶಪ್ಪ, ಎಪಿಎಂಸಿ ಮಾಜಿ ಅಧ್ಯಕ್ಷ ಜಿ. ಮಂಜುನಾಥ್ ಪಟೇಲ್, ಕೆಪಿಸಿಸಿ ವಕ್ತಾರ ನಿಖಿಲ್ ಕೊಂಡಜ್ಜಿ, ಡಿಸಿಸಿ ಬ್ಯಾಂಕಿನ ಮಾಜಿ ಉಪಾಧ್ಯಕ್ಷ ಜಿಗಳಿ ಆನಂದಪ್ಪ, ನಿಟ್ಟೂರು ಸಂಜೀವಪ್ಪ, ತಾ. ಸಾಧು ವೀರಶೈವ ಸಮಾಜದ ಅಧ್ಯಕ್ಷ ಮಹಾದೇವಪ್ಪ ಗೌಡ್ರು ಮತ್ತಿತರರು ಭಾಗವಹಿಸಿದ್ದರು.

ವಿವಿಧ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಎಸ್ಸೆಸ್ ಚಾಲನೆ

ದಾವಣಗೆರೆ, ಜ.15- ಸ್ಥಳೀಯ ಶಾಸಕರ ಪ್ರದೇಶಾಭಿವೃದ್ಧಿ ಅನುದಾನದಡಿಯಲ್ಲಿ 25.80 ಲಕ್ಷ ರೂ. ವೆಚ್ಚದಲ್ಲಿ ಭಾರತ್ ಕಾಲೋನಿಯಲ್ಲಿ ಸಿ.ಸಿ.ರಸ್ತೆ ಅಭಿವೃದ್ಧಿ ಕಾಮಗಾರಿಗಳಿಗೆ ಶಾಸಕ ಡಾ॥ ಶಾಮನೂರು ಶಿವಶಂಕರಪ್ಪ ಅವರು ಇಂದು ಭೂಮಿ ಪೂಜೆ ನೆರವೇರಿಸಿದರು.

ಈ ಸಂದರ್ಭದಲ್ಲಿ ಉದ್ಯಮಿ ಅಥಣಿ ವೀರಣ್ಣ, ಪಾಲಿಕೆಯ 20ನೇ ವಾರ್ಡಿನ ಸದಸ್ಯರಾದ ಶ್ರೀಮತಿ ಯಶೋಧ ಉಮೇಶ್, ಎಪಿಎಂಸಿ ನಿರ್ದೇಶಕ ದೊಗ್ಗಳ್ಳಿ ಬಸವರಾಜ್, ಆಲೂರು ನಾಗಭೂಷಣ್, ವೆಂಕಟೇಶ್‌ನಾಯ್ಕ, ಸೊಸೈಟಿ ವೆಂಕಟೇಶನಾಯ್ಕ, ಯಲವಟ್ಟಿ ಉಮೇಶ್, ತಿಪ್ಪೇಸ್ವಾಮಿ, ತಿಪ್ಪಣ್ಣ, ಗಣೇಶಪ್ಪ, ಮುರುಗೇಶ್, ಅಜ್ಜಪ್ಪ, ಕೆಆರ್‌ಐಡಿಎಲ್‌ನ ನಿರಂಜನ್ ಮತ್ತಿತರರಿದ್ದರು.

ಕಾವಿಧಾರಿಗಳ ಕ್ಷಮೆ ಯಾಚಿಸುತ್ತೇನೆ

(3ನೇ ಪುಟದಿಂದ) ಸಹನೆಯನ್ನು ಕೆಲವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ ಎಂದರು. ಮುಖ್ಯಮಂತ್ರಿಯವರನ್ನು ಎಲ್ಲರೂ ಗೌರವಿಸಬೇಕು. ಸಂಖ್ಯಾಬಲದಿಂದ ಮುಖ್ಯಮಂತ್ರಿ ಬೆದರಿಸುತ್ತೇವೆ ಎಂದು ಭಾವಿಸುವುದು ತಪ್ಪು ಎಂದು ನಿಡುಮಾಮಿಡಿ ಶ್ರೀಗಳು ಹೇಳಿದರು. ಯಡಿಯೂರಪ್ಪ 6 ಕೋಟಿ ಜನರ ಪ್ರತಿನಿಧಿ. ಅವರು ಮಠಕ್ಕೆ ಬಂದಾಗ ಕಡಿಮೆ ಎತ್ತರದಲ್ಲಿ ಕೂರಿಸುವುದು, ತಾವು ಎತ್ತರದಲ್ಲಿ ಕೂರುವ ಪದ್ಧತಿ ಮಾಡಬಾರದು ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಅಭಯ ಭಾರತೀಯರ ಔದಾರ್ಯ : ಸಿಎಂ

(3ನೇ ಪುಟದಿಂದ) ಅನುಪಮ ಎಂದು ತಿಳಿಸಿದರು. ಗೋವಾ ಹಾಗೂ ಡಮನ್ ಪ್ರಾಂತ್ಯದ ಮಹಾ ಧರ್ಮಾಧ್ಯಕ್ಷ ಡಾ. ಫಿಲಿಪೆ ನೇರಿ ಫೆರಾವೋ ಮಾತನಾಡಿ, ಈ ಕಿರು ಬೆಸಿಲಿಕ ಕರ್ನಾಟಕದಲ್ಲಿ ಐತಿಹಾಸಿಕ ಮೌಲ್ಯ ಹೊಂದಿದೆ. 200 ವರ್ಷಗಳಲ್ಲಿ ಪವಾಡ ಸದೃಶವಾಗಿ ಆರೋಗ್ಯವನ್ನು ನೀಡುತ್ತಾ ಬಂದಿದೆ ಎಂದರು. ಇಸ್ಲಾಂ ಬೋಧಕ ಮೌಲಾನಾ ಇಬ್ರಾಹಿಂ ಸಖಾಫಿ ಮಾತನಾಡಿ, ಭಾರತ ಸರ್ವ ಜನಾಂಗದ ಶಾಂತಿಯ ತೋಟ. ಹಲವು ವರ್ಣರಂಜಿತ ಹೂವುಗಳಂತೆ ಜನರು ಇರುವ ಈ ದೇಶದಲ್ಲಿ ನಾವು ಮೈತ್ರಿಯಿಂದ ಇರಬೇಕು ಎಂದು ಕರೆ ನೀಡಿದರು. ಇದಕ್ಕೂ ಮುಂಚೆ ಬೆಳಿಗ್ಗೆ 9 ಗಂಟೆಯಿಂದ ನಡೆದ ಧಾರ್ಮಿಕ ವಿಧಿ ವಿಧಾನಗಳಲ್ಲಿ ಕಿರು ಬಸಿಲಿಕಾವನ್ನು ಆರಂಭಿಸಲಾಯಿತು.

ಸಮಾರಂಭದ ಅಧ್ಯಕ್ಷತೆಯನ್ನು ಬೆಂಗಳೂರು ವಲಯದ ಮಹಾಧರ್ಮಾಧ್ಯಕ್ಷ ಡಾ. ಪೀಟರ್ ಮಚಾಡೋ ವಹಿಸಿಕೊಂಡಿದ್ದರು.

ಸಮಾರಂಭದಲ್ಲಿ ಗೋವಾ - ಡಮನ್ ವಲಯದ ಮಹಾಧರ್ಮಾಧ್ಯಕ್ಷ ಡಾ. ಫಿಲಿಪೆ ನೇರಿ ಫೆರಾವೋ, ಚಿತ್ರದುರ್ಗ ಮುರುಘಾಮಠದ ಶ್ರೀ ಶಿವಮೂರ್ತಿ ಶರಣರು, ಧರ್ಮಾಧ್ಯಕ್ಷರಾದ ಅಲ್ಯೋಸಿಸ್ ಪೌಲ್ ಡಿಸೋಜಾ, ಹೆನ್ರಿ ಡಿಸೋಜಾ, ಗೆರಾಲ್ಡ್ ಐಸಾಕ್ ಲೋಬೋ, ಟಿ. ಆಂಥೋಣಿ ಸ್ವಾಮಿ, ರಾಬರ್ಟ್ ಎಂ. ಮಿರಾಂಡಾ, ಡೆರೆಕ್ ಫರ್ನಾಂಡೀಸ್, ಗೀವರ್ಘೀಸ್ ಮಾರ್ ಮಕರೋಯಿಸ್ ಕಲಾಯಿಲ್, ಕೆ.ಎ. ವಿಲಿಯಂ, ಇಗ್ನೀಷಿಯಸ್ ಡಿಸೋಜಾ, ಸಂಸದರಾದ ಜಿ.ಎಂ. ಸಿದ್ದೇಶ್ವರ, ಬಿ.ವೈ. ರಾಘವೇಂದ್ರ, ಶಾಸಕ ಎಸ್. ರಾಮಪ್ಪ, ಎಸ್.ವಿ. ರಾಮಚಂದ್ರ ಮತ್ತಿತರರು ಉಪಸ್ಥಿತರಿದ್ದರು.

ಕಿರು ಬೆಸಲಿಕಾದ ಪಾದರ್ ಆಂಥೋಣಿ ಪೀಟರ್ ಅವರು ದೇವಾಲಯ ನಡೆದು ಬಂದ ಹಾದಿ ವಿವರಿಸಿದರು. ಶಿವಮೊಗ್ಗ ವಲಯದ ಧರ್ಮಾಧ್ಯಕ್ಷ ಡಾ. ಫ್ರಾನ್ಸಿಸ್ ಸರಾವೋ ಸ್ವಾಗತಿಸಿದರು.

ಕಿರು ಬೆಸಿಲಿಕಾ ವೇಳೆ ಒಳ ಮೀಸಲಾತಿಗೆ ಒತ್ತಾಯ

ಹರಿಹರ, ಜ. 15 - ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸಬೇಕೆಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯವರು ಮಾತೆ ಮೇರಿ ದೇವಾಲಯವನ್ನು ಕಿರು ಬೆಸಿಲಿಕ ಎಂದು ಘೋಷಿಸುವ ಸಮಾರಂಭದಲ್ಲಿ ಘೋಷಣೆ ಕೂಗಿದ ಘಟನೆ ನಡೆದಿದೆ. ಸಿಎಂ ಬಿ.ಎಸ್. ಯಡಿಯೂರಪ್ಪನವರು ತಮ್ಮ ಮಾತುಗಳನ್ನು ಮುಗಿಸುವ ಹಂತದಲ್ಲಿದ್ದಾಗ ಸಂಘಟನೆಯ ಹರಿಹರ ತಾಲ್ಲೂಕು ಸಂಚಾಲಕ ಪಿ.ಜೆ. ಮಹಾಂತೇಶ್ ಅವರು ಎದ್ದು ನಿಂತು, ಒಳ ಮೀಸ ಲಾತಿ ನೀಡ ಬೇಕೆಂದು ಒತ್ತಾಯಿಸಿ ಘೋಷಣೆ ಕೂಗಿದರು. ತಕ್ಷಣವೇ ಪೊಲೀಸರು ಅವರನ್ನು ಹೊರಗೆ ಕರೆದೊಯ್ದರು. ಒಳ ಮೀಸಲಾತಿಗಾಗಿ ಒತ್ತಾಯಿಸುತ್ತಿದ್ದ ಸಂಘಟನೆಯ ಎಲ್ಲ ಕಾರ್ಯಕರ್ತರನ್ನು ನಂತರ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರು.

10 ಎಕರೆ ಜಾಗ ಕೊಡಿ

ಹರಿಹರದ ಮಾತೆ ಮೇರಿ ಕಿರು ಬೆಸಲಿಕಾಗೆ ಲಕ್ಷಾಂತರ ಭಕ್ತರು ಬರುತ್ತಾರೆ. ಅವರು ತಂಗಲು ವ್ಯವಸ್ಥೆ ಇಲ್ಲ. ಇದಕ್ಕಾಗಿ ಸರ್ಕಾರ ಯಾತ್ರಿ ನಿವಾಸ ನಿರ್ಮಿಸಿಕೊಡಬೇಕು ಹಾಗೂ 10 ಎಕರೆ ಜಾಗ ನೀಡಬೇಕು ಎಂದು ಶಿವಮೊಗ್ಗ ವಲಯದ ಧರ್ಮಾಧ್ಯಕ್ಷ ಡಾ. ಫ್ರಾನ್ಸಿಸ್ ಸೆರಾವೋ ಅವರು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರಿಗೆ ಮನವಿ ಸಲ್ಲಿಸಿದರು.

ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು

ಜಿ. ವೇದಮೂರ್ತಿ
ಶ್ರೀ ವಿನಾಯಕ ರೈಸ್ ಮಿಲ್

ಇಂದು ಜನ್ಮ ದಿನ ಆಚರಿಸಿಕೊಳ್ಳುತ್ತಿರುವ ಸ್ನೇಹ ಜೀವಿಗಳು, ಸರಳ-ಸಜ್ಜನಿಕೆಯ ರಾಜಕಾರಣಿಗಳು, ಸಮಾಜ ಸೇವಕರು, ಕ್ರೀಡಾಭಿಮಾನಿಗಳು, ದೀನ ದುರ್ಬಲರ ಕಷ್ಟಗಳಿಗೆ ಸ್ಪಂದಿಸಿ, ಜನ ಮನ ಗೆದ್ದಿರುವ ನಮ್ಮೆಲ್ಲರ ಪ್ರೀತಿಯ

ಡಾ॥ ಎಸ್.ಎಸ್. ಬಕ್ಕೇಶ್

ಜಿಲ್ಲಾ ಪರಿಷತ್ ಮಾಜಿ ಅಧ್ಯಕ್ಷರು ಹಾಗೂ ಮ್ಯಾನೇಜಿಂಗ್ ಡೈರೆಕ್ಟರ್, ಶಾಮನೂರು ಷುಗರ್ಸ್, ದುಗ್ಗಾವತಿ ಇವರಿಗೆ ಮತ್ತು ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರೂ ಆದ

ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ

ಅವರುಗಳಿಗೆ ಜನ್ಮ ದಿನದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತಾ, ಶ್ರೀಯುತರುಗಳಿಗೆ ಭಗವಂತನು ಆಯುಷ್ಯ, ಆರೋಗ್ಯ ಭಾಗ್ಯವನ್ನು ಸದಾ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

ಶುಭ ಕೋರುವವರು : ಕೆ. ಗಣೇಶರಾವ್, ಗಣೇಶ ಹೋಟೆಲ್ • ಯಲವಟ್ಟಿ ಮಂಜಣ್ಣ • ಕಿರಾಣಿ ಮಲ್ಲಣ್ಣ • ವಿ. ದ್ಯಾವಪ್ಪ • ಸುಭಾಷ್ • ಶ್ರೀಮತಿ ಅನಿಷಾ ಸಿದ್ದೇಶ್, • ಶಿವಸ್ವಾಮಿ ಶಿವ ಸ್ಟೀಲ್ಸ್ • ಶ್ರೀಮತಿ ಅಶ್ವಿನಿ ಪ್ರಶಾಂತ್ • ಕುಮಾರಸ್ವಾಮಿ ತೊಗಲೇರಿ • ಹೆಚ್. ಅನಂತಣ್ಣ, ವರ್ತಕರು • ಶಿವಕುಮಾರ್ ಎಣ್ಣೇರ್ • ಶ್ರೀಮತಿ ಅನಿತಾ ಅನಂತಣ್ಣ • ಶ್ರೀಮತಿ ಸುಜಾತ ರವಿಕುಮಾರ್ • ಶ್ರೀಮತಿ ರೇಣುಕಾ ಮಂಜುನಾಥ್ • ನಂದಿತಾವರೆ ಸೂರ್ಯನಾರಾಯಣಪ್ಪ • ಕಾರ್ ಮಲ್ಲಿಕಾರ್ಜುನ್ • ನೀಲಕಂಠಪ್ಪ ರಿಯಲ್ ಎಸ್ಟೇಟ್ ಏಜೆಂಟ್ • ಜೆ.ಬಿ. ಉಮೇಶ್ • ಜಿ.ಎಸ್. ವೀರಣ್ಣ • ಕೆ.ಎಸ್. ಮಂಜುನಾಥ ಕರೇಶಿವಪ್ಪ • ತಾಳದ ರಾಜು • ಬಾಬು • ಪ್ರಕಾಶ್‌ಮಾಗಿ • ವಿನಯ್

ವಿ. ಪ್ರಕಾಶ್ | ಜಿ.ಎನ್. ರವಿಕುಮಾರ್ ಪೂಜಾ ಸ್ಟೀಲ್ಸ್ | ಹೆಚ್. ಅನಂತಣ್ಣ ವರ್ತಕರು | ಜಿ. ಎನ್. ಕೋಟೆಪ್ಪ | ಜೆ.ಕೆ. ಮಹೇಶ್ | ಮಲ್ಲಿಕಾರ್ಜುನ್

ವಿ. ಸಿದ್ದೇಶ್ | ಹೆಚ್. ಚಂದ್ರಪ್ಪ, ಆಂಜನೇಯ | ಬಿ.ಹೆಚ್. ಮಂಜುನಾಥ ಮಾಜಿ ಸೈನಿಕರು | ಉಮೇಶಣ್ಣ ಗಣೇಶ ಹೋಟೆಲ್ | ಎಸ್. ನೀಲಕಂಠಪ್ಪ ರಿಯಲ್ ಎಸ್ಟೇಟ್ | ಕೆ. ಗಣೇಶ್ ರಾವ್

ಜನ್ಮದಿನದ ಶುಭಾಶಯಗಳು

ಇಂದು ಜನ್ಮ ದಿನ ಆಚರಿಸಿಕೊಳ್ಳುತ್ತಿರುವ ಸ್ನೇಹ ಜೀವಿಗಳು, ಸರಳ-ಸಜ್ಜನಿಕೆಯ ರಾಜಕಾರಣಿಗಳು, ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರೂ ಆದ

ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ ಅವರಿಗೆ

ಜನ್ಮ ದಿನದ ಹಾರ್ದಿಕ ಶುಭಾಶಯಗಳು.

ಶ್ರೀ ಆರ್. ತಿಮ್ಮಪ್ಪ, ನಿಬಗೂರು | ಶ್ರೀ ಟಿ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ | ಶ್ರೀ ಪುರುಷೋತ್ತಮ, (ಗುರುಸ್ವಾಮಿ) | ಶ್ರೀ ಲೋಕಪ್ಪ, (ಗುರುಸ್ವಾಮಿ)

ಶ್ರೀ ಸ್ವಾಮಿ ಅಯ್ಯಪ್ಪ ಶಬರಿಮಲೈ ಸೇವಾ ಸಮಿತಿ (ರಿ.),
ಲೇಬರ್ ಕಾಲೋನಿ, ನಿಟ್ಟುವಳ್ಳಿ ರಸ್ತೆ, ದಾವಣಗೆರೆ.

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರರಾದ ಶ್ರೀಯುತ ಕೆ. ಮಂಜುನಾಥ್ ಬಿನ್ ಲೇ॥ ಕೆ. ನಾರಪ್ಪ ಮತ್ತು ಕೆ. ನಂಜಪ್ಪ ಬಿನ್ ಲೇ॥ ಕೆ. ನಾರಪ್ಪ ವಾಸ : #122/6 & 7, ಕಡ್ಲೆಬಾಳು ನಂಜಪ್ಪನ ಗಲ್ಲಿ, ಕಾಳಿಕಾದೇವಿ ರೋಡ್, ದಾವಣಗೆರೆ-577 001ರ ವಾಸಿಯಾದ ಇವರು ನೀಡಿದ ಮಾಹಿತಿಯ ಮೇರೆಗೆ ಈ ಮೂಲಕ ಸಾರ್ವಜನಿಕ ಪ್ರಕಟಣೆ ಕೊಡುವುದೇನೆಂದರೆ, ನಮ್ಮ ಕಕ್ಷಿದಾರರ ಖಾಸಾ ಸಹೋದರನಾದ ಕೆ. ಶಿವಕುಮಾರ್ ಬಿನ್ ಲೇ॥ ಕೆ. ನಾರಪ್ಪ ಇವರು ದಿನಾಂಕ : 11.01.2020 ರಂದು ಜನತಾವಾಣಿ ದಿನಪತ್ರಿಕೆ, ದಾವಣಗೆರೆಯಲ್ಲಿ ತಪ್ಪು ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದು, ಅದಕ್ಕೆ ಪ್ರತಿಯಾಗಿ ನಮ್ಮ ಕಕ್ಷಿದಾರರು ಸಾರ್ವಜನಿಕರಿಗೆ ನಿಜ ಮತ್ತು ವಸ್ತುಸ್ಥಿತಿಯನ್ನು ಈ ಮೂಲಕ ತಿಳಿಸುತ್ತಿದ್ದು, ಕೆ. ಶಿವಕುಮಾರ್ ಬಿನ್ ಲೇ॥ ಕೆ. ನಾರಪ್ಪ ಆದ ಇವರು ದಿನಾಂಕ : 12.12.1988 ರಂದು ಒಟ್ಟು ಕುಟುಂಬದಿಂದ ಅಂದರೆ ಲೇ॥ ಕೆ. ನಾರಪ್ಪ ಬಿನ್ ಲೇ॥ ಮುನಿಯಪ್ಪ ಹಾಗೂ ಅವರ ಸಹೋದರರಿಂದ ಅಂದರೆ ಮೇಲ್ಕಾಣಿಸಿದ ನಮ್ಮ ಕಕ್ಷಿದಾರರಿಂದ ಹಕ್ಕು ಖುಲಾಸೆಗೊಂಡು ಹಕ್ಕು ಖುಲಾಸೆ ಪತ್ರವನ್ನು ದಾವಣಗೆರೆ ನೋಂದಣಾಧಿಕಾರಿಗಳ ಕಾರ್ಯಾಲಯದಲ್ಲಿ ನೋಂದಾಯಿಸಿದ್ದು ಸದರಿ ರಿಜಿಸ್ಟರ್ ನಂ. 4383/1988-89 ವುಳ್ಳ ರಿಲೀಜ್ ಯಾನೆ/ಹಕ್ಕು ಖುಲಾಸೆ ಪತ್ರದ ಮೂಲಕ ಒಟ್ಟು ಕುಟುಂಬದ ಆಸ್ತಿಯಲ್ಲಿ ತಮಗೆ ಬರತಕ್ಕ ಆಸ್ತಿಯನ್ನು ತೆಗೆದುಕೊಂಡು ಉಳಿದಿರುವ ಕುಟುಂಬದ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲ ಎಂದು ಖುಲಾಸೆಗೊಂಡು ಒಟ್ಟು ಕುಟುಂಬದಿಂದ ಹೋಗಿರುತ್ತೀರಿ. ಆದಾಗ್ಯೂ ಸಹ ನೀವು ಮೇಲ್ಕಾಣಿಸಿದ ದಿನಾಂಕದಂದು ತಪ್ಪು ಸಾರ್ವಜನಿಕ ಪ್ರಕಟಣೆ ಹೊರಡಿಸಿ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಉಂಟು ಮಾಡಿರುತ್ತೀರಿ. ನೀವು ದಿನಾಂಕ : 11.01.2020 ರಂದು ಜನತಾವಾಣಿ ಪತ್ರಿಕೆಯಲ್ಲಿ ಹೊರಡಿಸಿರುವುದು ಸಂಪೂರ್ಣ ತಪ್ಪು ಎಂದು ಮತ್ತು ಸದರಿ ಕೆ. ಶಿವಕುಮಾರ್ ಬಿನ್ ಲೇ॥ ನಾರಪ್ಪ ಇವರು ಒಟ್ಟು ಕುಟುಂಬದಿಂದ ಖುಲಾಸೆಯಾಗಿರುವುದರಿಂದ ಅವರಿಗೆ ಯಾವುದೇ ಹಕ್ಕು ಹಿಸ್ಸೆ, ದಾವಣಗೆರೆ ಗ್ರಾಮದ ರಿ.ಸ.ನಂ.:124/2 ರಲ್ಲಿ 3 ಎಕರೆ, 30 ಗುಂಟೆ ಜಮೀನಿನಲ್ಲಿ ಯಾವುದೇ ಹಕ್ಕು ಹಿಸ್ಸೆ ಇರುವುದಿಲ್ಲ. 30 ಗುಂಟೆ ಅಕ್ವೇರ್ ಹೊರತುಪಡಿಸಿ 3 ಎಕರೆಯಲ್ಲಿ ಯಾವುದೇ ಹಕ್ಕು, ಹಿಸ್ಸೆ ಇರುವುದಿಲ್ಲ ಎಂದು ಸಾರ್ವಜನಿಕರ ಗಮನಕ್ಕೆ ಈ ಮೂಲಕ ತಿಳಿಸುತ್ತೇವೆ. ಆದ್ದರಿಂದ ಸಾರ್ವಜನಿಕರು ಸದರಿ ದಿನಾಂಕ : 11.01.2020 ರಂದು ಜನತಾವಾಣಿ ಪತ್ರಿಕೆಯಲ್ಲಿ ಹೊರಡಿಸಿದ ಸಾರ್ವಜನಿಕ ಪ್ರಕಟಣೆ ತಪ್ಪು ಎಂದು ಹಾಗೂ ಸದರಿ ಶಿವಕುಮಾರ್ ರವರು ಈ ಕೆಳಕಂಡ ಷೆಡ್ಯೂಲ್ ಆಸ್ತಿಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಹಾಗೂ ಹಕ್ಕು ಖುಲಾಸೆಗೊಂಡು ಒಟ್ಟು ಕುಟುಂಬದಿಂದ ಹೊರ ಹೋಗಿದ್ದು, ಅವರಿಗೂ ಮತ್ತು ಈ ಕೆಳಕಂಡ ಷೆಡ್ಯೂಲ್ ಆಸ್ತಿಗಳಿಗೂ ಯಾವುದೇ ಸಂಬಂಧ ಇರುವುದಿಲ್ಲವೆಂದು ತಿಳಿಸುತ್ತೇವೆ.

ಷೆಡ್ಯೂಲ್ : ದಾವಣಗೆರೆ ಗ್ರಾಮದ ರಿ.ಸ.ನಂ.:124/2ರಲ್ಲಿ ಅಳತೆ 3 ಎಕರೆ, 30 ಗುಂಟೆ, (ಸಿ.ಐ.ಟಿ.ಬಿ.ಗೆ) ಸ್ವಾಧೀನಕ್ಕೆ ಹೋಗಿದ್ದು ಉಳಿದ 3 ಎಕರೆ ಜಮೀನಿಗೆ ಚಕ್ಕುಬಂದಿ ಪೂರ್ವಕ್ಕೆ: ರಿಂಗ್ ರೋಡ್, ಪಶ್ಚಿಮಕ್ಕೆ : ಪಿ.ಬಿ. ರೋಡ್, ಉತ್ತರಕ್ಕೆ : ಕಾಳಿಂಗಪ್ಪನವರ ಜಮೀನು, ದಕ್ಷಿಣಕ್ಕೆ : ಯಲ್ಲಮ್ಮ -ನಾರಾಯಣ ನವರ ಜಮೀನು.

ಸಹಿ/-ವಕೀಲರು, ಹೆಚ್.ಎಸ್. ಬಸವರಾಜ್
ದಿನಾಂಕ : 15.01.2020

ಸಹಿ/-
ಕಕ್ಷಿದಾರರ ಸಹಿ

ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕೂಲಂಬಿ, ಹೊನ್ನಾಳಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇದರ

ಚುನಾವಣಾ ಸೂಚನೆ

ಇದರ ಮುಂದಿನ 5 ವರ್ಷಗಳ ಅವಧಿಗೆ ಆಡಳಿತ ಮಂಡಲಿ ನಿರ್ದೇಶಕರ ಚುನಾವಣೆಯನ್ನು ದಿ. : 31.01.2020 ರಂದು ನಿಗದಿಪಡಿಸಲಾಗಿರುತ್ತದೆ.

ನಾಮಪತ್ರ ಸಲ್ಲಿಸಲು ಕೊನೆಯ ದಿನಾಂಕ : 22.01.2020
ನಾಮಪತ್ರ ಪರಿಶೀಲನೆ : 23.01.2020
ನಾಮಪತ್ರ ವಾಪಸ್ ಪಡೆಯುವುದು : 24.01.2020

ಸಂಘದ ಆಸಕ್ತ ಅರ್ಹ ಸದಸ್ಯರು ಹೆಚ್ಚಿನ ಮಾಹಿತಿಗಾಗಿ ಸಂಘದ ಮುಖ್ಯಕಾರ್ಯನಿರ್ವಹಣಾಧಿಕಾರಿಯವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ. ಚುನಾವಣಾ ವೇಳಾಪಟ್ಟಿಯನ್ನು ಸಂಘದ ಸೂಚನಾ ಫಲಕದಲ್ಲಿ ಪ್ರಕಟಿಸಲಾಗಿರುತ್ತದೆ.

ಸಹಿ/- **(ಭಾಗ್ಯಶ್ರೀ ಎಸ್. ಪಾಟೀಲ),** ರಿಟರ್ನಿಂಗ್ ಅಧಿಕಾರಿ
ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿ., ಕೂಲಂಬಿ.
ಹೊನ್ನಾಳಿ ತಾ॥ ದಾವಣಗೆರೆ ಜಿ॥

ಜನ್ಮದಿನದ ಶುಭಾಶಯಗಳು



ಬರಪೀಡಿತವನ್ನು ತೊಲಗಿಸಿದ ಭಗೀರಥನಾಗಿ, ಜಗಳೂರು ಕ್ಷೇತ್ರದ ಅಭಿವೃದ್ಧಿಯ ಹರಿಕಾರನಾಗಿ, ಜಗಳೂರು ಕ್ಷೇತ್ರದ ಮನೆ ಮಗನಾಗಿ ಕಂಗೊಳಿಸುತ್ತಿರುವ ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ

ಸನ್ಮಾನ್ಯ ಶ್ರೀ ಎಸ್.ವಿ. ರಾಮಚಂದ್ರ ಅಣ್ಣನವರಿಗೆ

ಜನ್ಮದಿನದ
ಹಾರ್ದಿಕ ಶುಭಾಶಯಗಳು.

ಐಗೂರು ಹನುಮಂತಪ್ಪ
ನಿರ್ದೇಶಕರು,
ನಾಯಕ ವಿದ್ಯಾರ್ಥಿ ನಿಲಯ,
ವಕ್ತಾರರು,
ಜಿಲ್ಲಾ ವಾಲ್ಮೀಕಿ ನಾಯಕ ಯುವ ಘಟಕ, ದಾವಣಗೆರೆ.

ಈ ಬಾರಿ ತೃತೀಯ ಲಿಂಗಿ ಮನೆ ಮುಖ್ಯಸ್ಥರ ಗಣತಿ

ನವದೆಹಲಿ, ಜ. 15 – ತೃತೀಯ ಲಿಂಗಿಗಳ ಕುಟುಂಬದ ಮುಖ್ಯಸ್ಥರಾಗಿರುವ ಹಾಗೂ ಅವರ ಕುಟುಂಬದ ಸದಸ್ಯರ ಬಗ್ಗೆ ಕೇಂದ್ರ ಸರ್ಕಾರ ಇದೇ ಮೊದಲ ಬಾರಿಗೆ ಮಾಹಿತಿ ಸಂಗ್ರಹಿಸಲು ಮುಂದಾಗಿದೆ ಎಂದು ಗೃಹ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಏಪ್ರಿಲ್ 1ರಿಂದ ಪ್ರತಿಯೊಂದು ಮನೆಗೆ ಗಣತಿದಾರರು ಭೇಟಿ ನೀಡಿ 31 ಪ್ರಶ್ನೆಗಳಿಗೆ ಮಾಹಿತಿ ಪಡೆಯಲಿದ್ದಾರೆ. ಇಂತಹ ಒಂದು ಪ್ರಶ್ನೆಯಲ್ಲಿ ಮನೆಯ ಮುಖ್ಯಸ್ಥನ ಲಿಂಗ ಯಾವುದು ಎಂಬ ಪ್ರಶ್ನೆಯೂ ಇದೆ. ಇದರಲ್ಲಿ ಪುರುಷ, ಮಹಿಳೆ ಹಾಗೂ ತೃತೀಯ ಲಿಂಗಿ ಎಂಬ ಮೂರು ಆಯ್ಕೆಗಳನ್ನು ನೀಡಲಾಗಿದೆ.

ಇದೇ ಮೊದಲ ಬಾರಿಗೆ ತೃತೀಯ ಲಿಂಗಿಗಳು ಮುಖ್ಯಸ್ಥರಾಗಿರುವ ಮನೆಗಳ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಈ ಹಿಂದೆ ಗಣತಿಯಲ್ಲಿ ಮನೆಯ ಮುಖ್ಯಸ್ಥ ಕಾಲಂನಲ್ಲಿ ಪುರುಷ ಹಾಗೂ ಮಹಿಳೆ ಎಂಬ ಆಯ್ಕೆಯನ್ನಷ್ಟೇ ನೀಡಲಾಗುತ್ತಿತ್ತು.

ಕಥೆ, ಕವನ, ಲೇಖನಕ್ಕೆ ಆಹ್ವಾನ

ದಾವಣಗೆರೆ, ಜ.15- ಆಂಜನೇಯ ಬಡಾವಣೆ ನಾಗರಿಕ ಹಿತರಕ್ಷಣಾ ಸಮಿತಿ ದ್ವಿಶತಮಾನೋತ್ಸವ ಅಂಗವಾಗಿ ಸ್ಮರಣ ಸಂಚಿಕೆ ಹೊರತರಲು ಉದ್ದೇಶಿಸಿದ್ದು, ಬಡಾವಣೆ ನಾಗರಿಕರಿಂದ ಕಥೆ, ಕವನ, ಲೇಖನ ಮತ್ತು ಪ್ರಬಂಧಗಳನ್ನು ಆಹ್ವಾನಿಸಲಾಗಿದೆ.

ಪ್ರಬಂಧ ಸ್ಪರ್ಧೆ ವಿಷಯಯಗಳು-ನಾಗರಿಕತೆಯ ನಾಗಾಲೋಟದಲ್ಲಿ ಮಾನವೀಯ ಮೌಲ್ಯಗಳ ಅಳಿವು-ಉಳಿವು ಹಾಗೂ ಬಲಿಷ್ಠ ಭಾರತ ಕಟ್ಟುವಲ್ಲಿ ಯುವಜನತೆಯ ಪಾತ್ರ. ಆಸಕ್ತ ವಿಷಯ ಕುರಿತು ಎರಡು ಪುಟಕ್ಕೆ ಮೀರದಂತೆ ಬರೆದು ಫೆಬ್ರವರಿ 10ರೊಳಗೆ ಪಾಸ್‌ಪೋರ್ಟ್ ಅಳತೆ ಭಾವಚಿತ್ರದೊಂದಿಗೆ ಮೊಬೈಲ್ ಸಂಖ್ಯೆಯನ್ನು ಬರೆದು ಕಳುಹಿಸುವುದು.

ವಿಳಾಸ: ಕೆ.ಎಸ್. ಮಂಜುನಾಥ, 783, ಎಂಇಎಸ್ ಕಾನ್ವೆಂಟ್ ರಸ್ತೆ, ಆಂಜನೇಯ ಬಡಾವಣೆ, ದಾವಣಗೆರೆ-577004. ಇಲ್ಲಿಗೆ ಕಳುಹಿಸಲು ಕಾರ್ಯದರ್ಶಿ ಪಿ. ಆನಂದರಾವ್ ಸಿಂಧೆ ತಿಳಿಸಿದ್ದಾರೆ. ಮಾಹಿತಿಗೆ-7022002518, 9449238595 ಸಂಪರ್ಕಿಸುವುದು.

ಮುಂಗಾರು ಆಗಮನ ಗುರುತಿಸುವಿಕೆ ಬದಲು

ನವದೆಹಲಿ, ಜ. 15 – ಹವಾಮಾನ ಇಲಾಖೆ ಈ ವರ್ಷದಿಂದ ಮುಂಗಾರು ಆಗಮನ ಹಾಗೂ ನಿರ್ಗಮನ ಗುರುತಿಸುವುದರಲ್ಲಿ ಬದಲಾವಣೆ ತರಲಿದೆ ಎಂದು ಕೇಂದ್ರ ಭೂ ವಿಜ್ಞಾನ ಸಚಿವಾಲಯ ತಿಳಿಸಿದೆ.

ಸಾಮಾನ್ಯವಾಗಿ ಜೂನ್ 1 ರಂದು ಮುಂಗಾರು ಕೇರಳಕ್ಕೆ ಆಗಮಿಸುತ್ತದೆ. ಈ ಗುರುತಿಸುವಿಕೆ ಹಿಂದಿನಂತೆ ಮುಂದುವರೆಯಲಿದೆ. ಆದರೆ, ಕೆಲ ರಾಜ್ಯಗಳು ಹಾಗೂ ನಗರಗಳಿಗೆ ಮುಂಗಾರು ಆಗಮಿಸುವ ದಿನಾಂಕ ಗುರುತಿಸುವುದರಲ್ಲಿ ಬದಲಾವಣೆ ತರಲಾಗುವುದು ಎಂದು ಸಚಿವಾಲಯದ ಕಾರ್ಯದರ್ಶಿ ಎಂ. ರಾಜೀವನ್ ತಿಳಿಸಿದ್ದಾರೆ.

ಸಿಆರ್‌ಪಿಎಫ್‌ಗೆ ಮಹೇಶ್ವರಿ ಮುಖ್ಯಸ್ಥ

ನವದೆಹಲಿ, ಜ. 15 – ಐಪಿಎಸ್ ಅಧಿಕಾರಿ ಆನಂದ್ ಪ್ರಕಾಶ್ ಮಹೇಶ್ವರಿ ಅವರನ್ನು ಸಿ.ಆರ್.ಪಿ.ಎಫ್.ನ ಪ್ರಧಾನ ನಿರ್ದೇಶಕರಾಗಿ ನೇಮಕಗೊಂಡಿದ್ದಾರೆ. ಅವರು 1984ರ ಉತ್ತರ ಪ್ರದೇಶ ತಂಡದ ಐಪಿಎಸ್ ಅಧಿಕಾರಿ.

ಅಯ್ಯಪ್ಪ ಸ್ವಾಮಿ ದೇಗುಲಗಳಲ್ಲಿ ಭಕ್ತಿಯ ನಾದ

ನಗರದ ವಿವಿಧ ದೇವಸ್ಥಾನಗಳಲ್ಲಿ ಶಬರಿಮಲೈನಲ್ಲಿಯ ಮಕರ ಜ್ಯೋತಿ ದರ್ಶನ

ದಾವಣಗೆರೆ, ಜ.15- ಸ್ವಾಮಿಯೇ ಶರಣಂ ಅಯ್ಯಪ್ಪ... ಎಂಬ ಭಕ್ತಿಯ ನಾದವು ನಗರದ ವಿವಿಧ ಭಾಗಗಳಲ್ಲಿನ ಶ್ರೀ ಅಯ್ಯಪ್ಪ ಸ್ವಾಮಿ ದೇಗುಲಗಳಲ್ಲಿ ಮೊಳಗಿತು.

ಮಕರ ಸಂಕ್ರಾಂತಿಯ ದಿನವಾದ ಇಂದು ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನಗಳಲ್ಲಿ ಅಯ್ಯಪ್ಪ ಸ್ವಾಮಿಗೆ ಬೆಳಿಗ್ಗೆ ಮತ್ತು ಸಂಜೆ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ವಿಶೇಷ ಹೂವುಗಳಿಂದ ಅಲಂಕರಿಸಿ ಕಂಗೊಳಿಸುವಂತೆ ಮಾಡಲಾಗಿತ್ತು.

ಅಯ್ಯಪ್ಪ ಸ್ವಾಮಿ ದರ್ಶನಕ್ಕಾಗಿ ಭಕ್ತ ಸಾಗರವೇ ಹರಿದು ಬಂದಿತ್ತು. ಸರತಿ ಸಾಲಿನಲ್ಲಿ ನಿಂತು ದೇವರ ದರ್ಶನ ಪಡೆದು ವಿಶೇಷ ಪೂಜೆ ನೆರವೇರಿಸಿ ಭಕ್ತಿ ಸಮರ್ಪಿಸಿ, ಅಯ್ಯಪ್ಪ ಸ್ವಾಮಿ ಕೃಪೆಗೆ ಪಾತ್ರರಾದರು.

ಲೇಬರ್ ಕಾಲೋನಿಯ ಸ್ವಾಮಿ ಅಯ್ಯಪ್ಪ ಶಬರಿ ಮಲೈ ದೇವಸ್ಥಾನದಲ್ಲಿ ವಿಶೇಷಾಲಂಕಾರ.

ಬಕ್ಕೇಶ್ವರ ಶಾಲೆ ಬಳಿಯ ಸ್ವಾಮಿ ಅಯ್ಯಪ್ಪ ದೇವಸ್ಥಾನದಲ್ಲಿ ವಿಶೇಷಾಲಂಕಾರ.

ಎಂಸಿಸಿ 'ಬಿ' ಬ್ಲಾಕ್ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ವಿಶೇಷಾಲಂಕಾರ.

ಲೇಬರ್ ಕಾಲೋನಿ: ಕೆ.ಬಿ ಬಡಾವಣೆಯ ಲೇಬರ್ ಕಾಲೋನಿಯಲ್ಲಿನ ಶ್ರೀ ಸ್ವಾಮಿ ಅಯ್ಯಪ್ಪ ಶಬರಿ ಮಲೈ ದೇವಸ್ಥಾನದಲ್ಲಿ ಬೆಳಗ್ಗೆ ಗಣಪತಿ ಹೋಮ, ಪೂರ್ಣಾಹುತಿ, ಮಹಾ ಅಭಿಷೇಕ, ಮಹಾ ಮಂಗಳಾರತಿ ನೆರವೇರಿದವು. ಮಧ್ಯಾಹ್ನದ ದೀಪೋತ್ಸವವನ್ನು ಶಾಸಕ ಎಸ್.ವಿ. ರಾಮಚಂದ್ರ ಅವರು ನೆರವೇರಿಸಿದರು. ಸ್ವಾಮಿಯ ಉತ್ಸವವು ಸುಮಂಗಲೆಯರಿಂದ ದೀಪೋತ್ಸವದೊಂದಿಗೆ ರಾಜಬೀದಿಗಳಲ್ಲಿ ಸಂಚರಿಸಿತು.

ಈ ಸಂದರ್ಭದಲ್ಲಿ ಶ್ರೀ ಸ್ವಾಮಿ ಅಯ್ಯಪ್ಪ ಶಬರಿ ಮಲೈ ಸೇವಾ ಸಮಿತಿ ಉಪಾಧ್ಯಕ್ಷ ಪುರುಷೋತ್ತಮ (ಬಾಲಾಜಿ), ಪ್ರಧಾನ ಕಾರ್ಯದರ್ಶಿ ಟಿ. ರವಿಕುಮಾರ್ ನಿಬ್ಗೂರ್, ಗುರುಸ್ವಾಮಿಗಳಾದ ಲೋಕಪ್ಪ ಸೇರಿದಂತೆ ಇತರರು ಇದ್ದರು. ಸಂಜೆ ದೇವಸ್ಥಾನಕ್ಕೆ ಆಗಮಿಸಿದ ನಗರ ಪಾಲಿಕೆ ಸದಸ್ಯ ಜೆ.ಎನ್. ಶ್ರೀನಿವಾಸ್ ಅಯ್ಯಪ್ಪ ಸ್ವಾಮಿ ದರ್ಶನ ಪಡೆದು ವಿಶೇಷ ಪೂಜೆ ಮಾಡಿಸಿದರು.

ಎಸ್ಸೆನ್ ಬಡಾವಣೆ: ಎಸ್. ನಿಜಲಿಂಗಪ್ಪ ಬಡಾವಣೆ ಬಕ್ಕೇಶ್ವರ ಶಾಲೆ ಹತ್ತಿರವಿರುವ ಶ್ರೀ ಓಂಕಾರ ಗಣಪತಿ ಮತ್ತು ಶ್ರೀ ಸ್ವಾಮಿ ಅಯ್ಯಪ್ಪ ದೇವಸ್ಥಾನದಲ್ಲಿ ಬೆಳಗ್ಗೆ ಪಂಚಾಮೃತ ಅಭಿಷೇಕ, ಮಹಾಮಂಗಳಾರತಿ ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು. ಸಂಜೆಯೂ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಯಿತು.

ಎಂಸಿಸಿ ಬಿ ಬ್ಲಾಕ್: ಎಂಸಿಸಿ ಬಿ ಬ್ಲಾಕ್ ಬಿಐಇಟಿ ಕಾಲೇಜು ರಸ್ತೆಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನದಲ್ಲಿ ಬೆಳಗ್ಗೆ ವಿಶೇಷ ಪೂಜೆ ನೆರವೇರಿಸಲಾಗಿತು. ಸಂಜೆ ಅಯ್ಯಪ್ಪ ಸ್ವಾಮಿಗೆ 108 ಲೀಟರ್ ಹಾಲಿನ ಅಭಿಷೇಕ, ಮೊಸರು, ತುಪ್ಪ, ಜೇನು ತುಪ್ಪ ಸಕ್ಕರೆ ಬಾಳೆಹಣ್ಣು ಸೇರಿದಂತೆ ನಾನಾ ವಿಧದ ಹಣ್ಣುಗಳು, ದ್ರಾಕ್ಷಿ, ಗೋಡಂಬಿ ಮತ್ತು ನಾನಾ ಫಲಗಳಿಂದ ಅಭಿಷೇಕ, ವಿಶೇಷ ಅಲಂಕಾರ, ಮಂತ್ರ ಪುಷ್ಪ, ಆರತಿ ಪೂಜೆ ಅಯ್ಯಪ್ಪಸ್ವಾಮಿಯ ಭಜನೆ, ಅಷ್ಟಾವಧಾನ ಮತ್ತಿತರ ಪೂಜೆಗಳು ನೆರವೇರಿದವು.

ಆಂಜನೇಯ ಬಡಾವಣೆಯ ಹಳೇ ಆರ್‌ಟಿಓ ಕಚೇರಿ ಬಳಿ, ಶಿವಾಲಿ ಚಿತ್ರಮಂದಿರ ಬಳಿಯ ಅಯ್ಯಪ್ಪ ಸ್ವಾಮಿ ದೇವಸ್ಥಾನಗಳಲ್ಲೂ ಸಹ ಬೆಳಗ್ಗೆ ಮತ್ತು ಸಂಜೆ ವಿವಿಧ ಪೂಜಾ ಕೈಂಕರ್ಯಗಳನ್ನು ನೆರವೇರಿಸಲಾಗಿದೆ.

ದೇವಸ್ಥಾನದಲ್ಲೇ ಮಕರ ಜ್ಯೋತಿ ದರ್ಶನ: ಮಕರ ಸಂಕ್ರಾಂತಿಯಂದು ವಿಶೇಷವಾಗಿ ಶಬರಿಮಲೈ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಬಳಿ ಕಾಣುವ ಮಕರ ಜ್ಯೋತಿಯ ದರ್ಶನವನ್ನು ನಗರದಲ್ಲಿ ಅಯ್ಯಪ್ಪ ಭಕ್ತರು ದೇವಸ್ಥಾನಗಳಲ್ಲಿ ಕುಳಿತು ಟಿವಿಯಲ್ಲಿ ಪ್ರಸಾರವಾದ ನೇರ ಪ್ರಸಾರದ ದೃಶ್ಯವನ್ನು ವೀಕ್ಷಿಸುವ ಮುಖೇನ ದರ್ಶನ ಪಡೆದು ಪುನೀತರಾದರು.

ನಿಜಲಿಂಗಪ್ಪ ಬಡಾವಣೆ ಬಕ್ಕೇಶ್ವರ ಶಾಲೆ ಹತ್ತಿರವಿರುವ ಶ್ರೀ ಓಂಕಾರ ಗಣಪತಿ ಮತ್ತು ಶ್ರೀ ಸ್ವಾಮಿ ಅಯ್ಯಪ್ಪ ದೇವಸ್ಥಾನ, ಎಂಸಿಸಿ ಬಿ ಬ್ಲಾಕ್ ಬಿಐಇಟಿ ಕಾಲೇಜು ರಸ್ತೆಯಲ್ಲಿರುವ ಅಯ್ಯಪ್ಪ ಸ್ವಾಮಿ ದೇವಸ್ಥಾನಗಳಲ್ಲಿ ಅಯ್ಯಪ್ಪ ದರ್ಶನಕ್ಕೆ ಬಂದಿದ್ದ ಭಕ್ತರಿಗೆ ಟಿವಿಯಲ್ಲಿ ಪ್ರಸಾರವಾದ ನೇರ ಪ್ರಸಾರದ ದೃಶ್ಯದ ವ್ಯವಸ್ಥೆ ಮಾಡುವ ಮುಖೇನ ಮಕರ ಜ್ಯೋತಿಯ ದರ್ಶನದ ಭಾಗ್ಯ ಕರುಣಿಸಲಾಗಿತ್ತು.

ಮಕರ ಜ್ಯೋತಿ ದರ್ಶನವಾಗುತ್ತಿದ್ದಂತೆ ಭಕ್ತರು ಸ್ವಾಮಿ ಶರಣಂ ಅಯ್ಯಪ್ಪ ಎಂಬುದಾಗಿ ಅಯ್ಯಪ್ಪನ ಸ್ಮರಣೆ ಮತ್ತು ಭಜನೆ ಮಾಡಿ ಆರಾಧಿಸಿದರು. ಮಕರ ಜ್ಯೋತಿ ದರ್ಶನ ಸಮಯದಲ್ಲಿ ದೇವಸ್ಥಾನಗಳಲ್ಲಿ ಮಹಾಮಂಗಳಾರತಿ, ಪಡಿಪೂಜೆ ನೆರವೇರಿಸಲಾಯಿತು. ನಂತರ ಭಕ್ತರಿಗೆ ತೀರ್ಥ ಪ್ರಸಾದ ವಿನಿಯೋಗಿಸಲಾಯಿತಲ್ಲದೇ, ಅನ್ನ ಸಂತರ್ಪಣೆ ಮಾಡಲಾಯಿತು.

ಹರಿಹರದ ಅಭಿವೃದ್ಧಿಗೆ ಅನುದಾನಕ್ಕಾಗಿ ಸಿಎಂಗೆ ಶಾಸಕ ರಾಮಪ್ಪ ಮನವಿ

ಹರಿಹರ, ಜ.15- ತಾಲ್ಲೂಕಿನ ಅಭಿವೃದ್ಧಿ ಬಗ್ಗೆ ಮಲತಾಯಿ ಧೋರಣೆ ಮಾಡದೇ, ತಾಲ್ಲೂಕಿನ ಸಮಗ್ರ ಅಭಿವೃದ್ಧಿಗೆ ಸಹಕಾರ ನೀಡುವಂತೆ ಹಾಗೂ ಅನುದಾನ ಬಿಡುಗಡೆ ಮಾಡುವಂತೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಶಾಸಕ ಎಸ್.ರಾಮಪ್ಪನವರು ನಗರದ ಆರೋಗ್ಯ ಮಾತೆ ಚರ್ಚ್‌ನಲ್ಲಿ ನಡೆದ ಸಮಾರಂಭದಲ್ಲಿ ಮನವಿಯನ್ನು ಸಲ್ಲಿಸಿದರು.

ಮಹಾತಪಸ್ವಿ ಶ್ರೀ ಸಿದ್ದಲಿಂಗ ಶಿವಾಚಾರ್ಯರು

84ನೇ ಪುಣ್ಯಸ್ಮರಣೆಯಲ್ಲಿ ರಾಮಘಟ್ಟ ಶ್ರೀಗಳ ವಿಶ್ಲೇಷಣೆ

ದಾವಣಗೆರೆ, ಜ.15- ಮಹಾ ತಪಸ್ವಿಯಾಗಿದ್ದ ಉಜ್ಜಯಿನಿ ಜಗದ್ಗುರು ಲಿಂ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಭಕ್ತರ ಉದ್ಧಾರಕ್ಕಾಗಿ ಶ್ರಮಿಸಿದರು ಎಂದು ರಾಮಘಟ್ಟದ ಶ್ರೀ ರೇವಣಸಿದ್ದ ಶಿವಾಚಾರ್ಯ ಸ್ವಾಮೀಜಿ ವಿಶ್ಲೇಷಿಸಿದರು.

ನಗರದ ಶ್ರೀ ಉಮಾಮಹೇಶ್ವರ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಏರ್ಪಾಡಾಗಿದ್ದ ಉಜ್ಜಯಿನಿ ಜಗದ್ಗುರು ಲಿಂ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ '84ನೇ ವರ್ಷದ ಪುಣ್ಯಸ್ಮರಣೆ' ಸಮಾರಂಭದ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡಿದರು.

ಶ್ರೀ ಸಿದ್ದಲಿಂಗ ಮಹಾಸ್ವಾಮಿಗಳು ಕಠಿಣವಾದ ತಪಸ್ಸು ಕೈಗೊಳ್ಳುತ್ತಿದ್ದರು. ಪೂಜೆ-ಅನುಷ್ಠಾನ-ಇಷ್ಟಲಿಂಗ ಪೂಜೆಯನ್ನು ಕಟ್ಟುನಿಟ್ಟಾಗಿ ಮಾಡುತ್ತಿದ್ದರು. ಭಕ್ತರು ಅವರನ್ನು ಹತ್ತಿರ ಹೋಗಿ ನಮಸ್ಕರಿಸಲು ಅವಕಾಶವಿರಲಿಲ್ಲ. ದೂರದಿಂದಲೇ ಜಗದ್ಗುರುಗಳಿಗೆ ಕೈ ಮುಗಿಯಬೇಕಾಗುತ್ತಿತ್ತು ಎಂದರು.

ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು ಬುಕ್ಕಾಂಬುದಿಯ ಬೆಟ್ಟದ ಮೇಲೆ ಗುಹೆಯೊಂದರಲ್ಲಿ ಅಖಂಡ ತಪಸ್ಸು ಕೈಗೊಂಡಿದ್ದು, ಆ ಪ್ರದೇಶ ಪುಣ್ಯಕ್ಷೇತ್ರವಾಗಿ ಕಂಗೊಳಿಸುತ್ತಿದೆ ಎಂದರು.

ಪಂಚಭೂತಗಳು ಪಂಚಪೀಠಗಳ ಸಂಕೇತವಾಗಿದ್ದು, ಭಕ್ತರು ಪಂಚ ಭೂತಗಳನ್ನು ಹಾಗೂ ಪಂಚಪೀಠಗಳನ್ನು ಶ್ರದ್ಧಾಭಕ್ತಿಯಿಂದ ಪೂಜಿಸಬೇಕೆಂದು ಆಶಿಸಿದರು.

ಗುರುವು ಅಧ್ಯಾತ್ಮಿಕ ಬೀಜ ಗಳನ್ನು ಉಪದೇಶದ ರೂಪದಲ್ಲಿ ಭಕ್ತರಲ್ಲಿ ಬಿತ್ತಿದ್ದು, ಮುಂದೆ ಒಳ್ಳೆಯ ಫಲವನ್ನು ನೀಡುತ್ತವೆ. ಗುರು ಗಳಿಗೆ ಯಾವ ಕಾರಣದಿಂದಲೂ ಅಗೌರವದಿಂದ ನಡೆದುಕೊಳ್ಳಬಾರದೆಂದು ಎಚ್ಚರಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ನಗರ ಪಾಲಿಕೆ ಮಾಜಿ ಸದಸ್ಯ ದಿನೇಶ್ ಕೆ. ಶೆಟ್ಟಿ ಅವರು, ಧಾರ್ಮಿಕ ಕಾರ್ಯಕ್ರಮಗಳಲ್ಲಿ ಯುವಕರು, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಧರ್ಮದ ಬಗ್ಗೆ ತಿಳಿಯಬೇಕೆಂದು ಕರೆ ನೀಡಿದರು.

ಹರಿಹರದ ಶ್ರೀ ವಿಶ್ವನಾಥಯ್ಯ ಶಾಸ್ತ್ರಿಗಳು, ಲಿಂ. ಸಿದ್ದಲಿಂಗ ಶಿವಾಚಾರ್ಯ ಮಹಾಸ್ವಾಮಿಗಳ ಪುರಾಣ ಪ್ರವಚನವನ್ನು ನಡೆಸಿಕೊಟ್ಟರು.

ಅಜ್ಜಂಪುರ ಶೆಟ್ರು ಜಯರಾಜ್ ಸ್ವಾಗತಿಸಿದರು. ಶ್ರೀ ಉದಯಶಂಕರ ಶಾಸ್ತ್ರಿಗಳು ಪ್ರಾಸ್ತಾವಿಕವಾಗಿ ಮಾತನಾಡಿದರು. ಯು.ಎಂ. ರಾಜಶೇಖರ್, ಕೆ.ಎಂ. ಶಿವಮೂರ್ತಯ್ಯ ಮತ್ತಿತರರಿದ್ದರು.

ರಾಜೇಂದ್ರ ಬಡಾವಣೆಯಲ್ಲಿ ಬನಶಂಕರಿ ದೇವಿಯ ಅದ್ದೂರಿ ಜಾತ್ರೆ

ದಾವಣಗೆರೆ, ಜ.15- ನಗರದ ಡಿಸಿಎಂ ಲೇಔಟ್ ಹಿಂಭಾಗದ ರಾಜೇಂದ್ರ ಬಡಾವಣೆಯಲ್ಲಿನ ಶ್ರೀ ಬನಶಂಕರಿ ದೇವಿ ದೇವಸ್ಥಾನದಲ್ಲಿ ಮೂರು ದಿನಗಳ ಕಾಲ ಬನದ ಹುಣ್ಣಿಮೆ ಪ್ರಯುಕ್ತ ಶ್ರೀ ಬನಶಂಕರಿ ದೇವಿಯ 6ನೇ ವರ್ಷದ ಜಾತ್ರಾ ಮಹೋತ್ಸವವು ಅದ್ದೂರಿಯಾಗಿ ನೆರವೇರಿತು. ಜಾತ್ರಾ ಮಹೋತ್ಸವದ ಪ್ರಯುಕ್ತ ದೇವಸ್ಥಾನದಲ್ಲಿ ವಿವಿಧ ಪೂಜಾ ಕೈಂಕರ್ಯಗಳು ನೆರವೇರಿದವು. ಶ್ರೀ ಬನಶಂಕರಿ, ಶ್ರೀ ಗಾಯತ್ರಿ ಮತ್ತು ಶ್ರೀ ಲಕ್ಷ್ಮಿ ದೇವಿ ಮೂರು ದೇವತೆಗಳಿಗೂ ವಿಶೇಷವಾಗಿ ಅಲಂಕರಿಸಲಾಗಿತ್ತು.

ಅನ್ನ ಸಂತರ್ಪಣೆ ನಡೆಯಿತು. ಸಂಜೆ ಬೆಳ್ಳಿ ರಥದಲ್ಲಿ ಶ್ರೀ ಬನಶಂಕರಿ ದೇವಿ ಮೂರ್ತಿಯ ಮೆರವಣಿಗೆ ದೇವಸ್ಥಾನದಿಂದ ಹೊರಟು ನಿಟುವಳ್ಳಿಯ ರಾಜಬೀದಿಗಳಲ್ಲಿ ಭವ್ಯವಾಗಿ ಸಾಗಿ ಪುನಃ ಆರಂಭಿಕ ಸ್ಥಳವಾದ ದೇವಸ್ಥಾನದ ಬಳಿ ಸಂಪನ್ನಗೊಂಡಿತು. ಮಹಿಳೆಯರು ಆರತಿ ತಟ್ಟೆ ಹಿಡಿದು ಬೆಳಕು ಚೆಲ್ಲುತ್ತಾ ಸಾಗಿದ್ದು ಮತ್ತು ವಿಶೇಷವಾಗಿ ಪ್ರಪ್ರಥಮ ಆರ್ಕೆಸ್ಟ್ರಾ ಮೆರವಣಿಗೆಗೆ ಮೆರಗು ನೀಡಿದವು.

ರಾಣೇಬೆನ್ನೂರಿನಲ್ಲಿ 3 ದಿನಗಳ ವೈಚಾರಿಕ ಹಬ್ಬ : ತೀವ್ರಗತಿಯಲ್ಲಿ ಸಿದ್ಧತೆ

ರಾಣೇಬೆನ್ನೂರು, ಜ.15- ನಾಳೆ ದಿನಾಂಕ 17 ರಿಂದ 19 ರವರೆಗೆ ಮೂರು ದಿನಗಳ ಕಾಲ 'ವೈಚಾರಿಕ ಹಬ್ಬದ ಸಿದ್ಧತೆ' ಕಾರ್ಯಕ್ರಮ ಇಲ್ಲಿನ ರಾಜರಾಜೇಶ್ವರಿ ಶಾಲೆ ಮೈದಾನದಲ್ಲಿ ನಡೆಯಲಿದ್ದು, ಸಿದ್ಧತೆ ತೀವ್ರಗತಿಯಲ್ಲಿದೆ.

ಶಿವಮೂರ್ತಿ ಮುರುಘಾ ಶರಣರು, ವಿವೇಕಾನಂದಾಶ್ರಮದ ಪ್ರಕಾಶಾನಂದ ಮಹಾರಾಜರು ಸೇರಿದಂತೆ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಉದ್ಘಾಟನೆ ಮಾಡಲಿದ್ದು, ಕೇಂದ್ರ ಸಚಿವ ಡಾ॥ ರಮೇಶ್ ಪೋಕ್ರಿಯಾಲ್, ಉಪಮುಖ್ಯಮಂತ್ರಿ ಡಾ. ಅಶ್ವತ್ಥನಾರಾಯಣ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್.ನಾಗಾಭರಣ, ಸಚಿವ ಸಿ.ಟಿ.ರವಿ ಭಾಗವಹಿಸುವರು.

ಮರಳು ಕಲೆ, ದಾಸವಾಣಿ, ಕನ್ನಡ ಭಾಷೆ-ಸಾಹಿತ್ಯ, ಕರ್ನಾಟಕದ ರಾಜ ಮನೆತನಗಳು, ಕರ್ನಾಟಕದ ಕಲಾವೈಭವ, ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ, ನೃತ್ಯ ರೂಪಕ, ಕರ್ನಾಟಕದ ಭಕ್ತಿ ಆಂದೋಲನಗಳು, ಭಾರತದ ವಿಕಾಸಕ್ಕೆ ಕರ್ನಾಟಕದ ಕೊಡುಗೆ, ಪತ್ರಿಕೋದ್ಯಮ ಹಾಗೂ ಕನ್ನಡ ಚಿತ್ರರಂಗ ಕುರಿತ ಫಲಕ ಚರ್ಚೆ, ಶೈಕ್ಷಣಿಕ ಗೋಷ್ಠಿ, ಮಹಿಳಾ ಗೋಷ್ಠಿ, ಪ್ರದರ್ಶನ ನಡೆಯಲಿವೆ.

ಚಕ್ರವರ್ತಿ ಸೂಲಿಬೆಲೆ, ನಟಿ ತಾರಾ, ನಟ ಸುನೀಲ್ ಪುರಾಣಿಕ್, ನಿರ್ದೇಶಕ ಅಶೋಕ್ ಕಶ್ಯಪ್, ಸಾಹಿತಿ ಅಸಾದುಲ್ಲಾ ಬೇಗ್ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿನ ಪರಿಣಿತರು, ಹೆಚ್ಚು ಸಂಘ-ಪರಿವಾರದವರೇ ಕಾರ್ಯಕ್ರಮಗಳ ಉಪನ್ಯಾಸಕರಾಗಿ ಬರಲಿದ್ದಾರೆ. ವೇದಿಕೆಗಳಿಗೆ ಕನಕ ಹಾಗೂ ಸರ್ವಜ್ಞರ ಹೆಸರಿಸಲಾಗಿದೆ.

ಉದ್ಘಾಟನೆ, ಸಮಾರೋಪ, ಸಾಂಸ್ಕೃತಿಕ ಕಾರ್ಯಕ್ರಮ, ಪ್ರದರ್ಶನ ಮುಂತಾದವುಗಳಿಗೆ ಸಾರ್ವಜನಿಕರಿಗೆ ಪ್ರವೇಶವಿದೆ. ಪ್ರತಿನಿಧಿಗಳಿಗೆ ಮಾತ್ರ ಪ್ರವೇಶ ಶುಲ್ಕ 300 ರೂ. ಇದ್ದು ಅವರಿಗೆ ಊಟ ಹಾಗೂ ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಅವರಿಗೆ ಪ್ರತ್ಯೇಕ ವೇದಿಕೆ ಸಿದ್ಧಗೊಳಿಸಲಾಗಿದೆ ಎಂದು ಸಂಘಟಕ ನಿರಂಜನ ಪೂಜಾರ್ ಮಾಹಿತಿ ನೀಡಿದರು.

ಚಿತ್ರದುರ್ಗ : ಎಸ್.ಆರ್.ಎಸ್ ಕಾಲೇಜಿಗೆ ಚಿನ್ನ

ಚಿತ್ರದುರ್ಗ, ಜ.15- ನಗರದ ಎಸ್.ಆರ್.ಎಸ್ ಪಿಯು ಕಾಲೇಜಿನ ಪ್ರಥಮ ಪಿಯು ವಿದ್ಯಾರ್ಥಿನಿ ಕು॥ ದೀಪ್ತಿ ಎಂ. ಇವರು ಬೆಂಗಳೂರಿನ ಎಲ್.ಆರ್. ಇಂಟರ್ ನ್ಯಾಷನಲ್ ಶಾಲೆಯಲ್ಲಿ ಮೊನ್ನೆ ನಡೆದ ಓಪನ್ ಸೌತ್ ಜೋನ್ ಟೆಕ್ವಾಂಡೋ ಸ್ಪರ್ಧೆಯಲ್ಲಿ ಭಾಗ ವಹಿಸಿ, 'ಕ್ಯೋರುಸಿ'ಯಲ್ಲಿ ಚಿನ್ನದ ಪದಕ ಹಾಗೂ 'ಪೊಮ್ಸೆ' ಯಲ್ಲಿ ಬೆಳ್ಳಿ ಪದಕ ಗಳಿಸಿದ್ದಾರೆ.

ಈ ವಿದ್ಯಾರ್ಥಿಯನ್ನು ಸಂಸ್ಥೆಯ ಅಧ್ಯಕ್ಷ ಬಿ.ಎ. ಲಿಂಗಾರೆಡ್ಡಿ, ಉಪಾಧ್ಯಕ್ಷ ಬಿ.ಎಲ್.ಅಮೋಘ, ಕಾರ್ಯ ದರ್ಶಿಗಳಾದ ಶ್ರೀಮತಿ ಸುಜಾತ ಲಿಂಗಾರೆಡ್ಡಿ, ಆಡಳಿತಾಧಿಕಾರಿ ಡಾ. ಟಿ.ಎಸ್.ರವಿ, ಪ್ರಾಂಶುಪಾಲ ಈ. ಗಂಗಾಧರ ಮತ್ತಿತರರು ಅಭಿನಂದಿಸಿದ್ದಾರೆ.

ಕಣ್ವಕುಪ್ಪೆ ಗವಿಮಠದಲ್ಲಿ ಸಂಭ್ರಮದ ಸಂಕ್ರಾಂತಿ

ಕಾರ್ಯಕ್ರಮದಲ್ಲಿ ನಟ ಜಗ್ಗೇಶ್ ಭಾಗಿ, ಶ್ರೀಗಳಿಂದ ಭಕ್ತರಿಗೆ ಎಳ್ಳು-ಬೆಲ್ಲ ವಿತರಣೆ

ಜಗಳೂರು, ಜ.15- ಭಕ್ತ ತನ್ನ ಸೇವೆಯನ್ನು ಶ್ರದ್ಧೆ-ಭಕ್ತಿಯಿಂದ ನೆರವೇರಿಸಿದಾಗ ಗುರುವಿನ ಅಂತಃಕರಣದಲ್ಲಿರುತ್ತಾನೆ. ಗುರು ಹರಸಿದರೆ ಬ್ರಹ್ಮ ಲಿಖಿತವೂ ಬದಲಾಗಬಲ್ಲ ಶಕ್ತಿ ಇದೆ ಎಂದು ಕಣ್ವಕುಪ್ಪೆ ಗವಿಮಠದ ಶ್ರೀ ನಾಲ್ವಡಿ ಶಾಂತಲಿಂಗ ಶಿವಾಚಾರ್ಯ ಸ್ವಾಮೀಜಿ ಹೇಳಿದರು.

ಅವರು ತಾಲ್ಲೂಕಿನ ಕಣ್ವಕುಪ್ಪೆ ಗವಿಮಠದಲ್ಲಿ ಇಂದು ನಡೆದ ಮಕರ ಸಂಕ್ರಾಂತಿ ವಿಶೇಷ ಪೂಜೆ ಹಾಗೂ ಶ್ರೀ ಸ್ವಾಮಿಯ ರಥೋತ್ಸವದ ವೇಳೆ ಆಶೀರ್ವಚನ ನೀಡಿ ಮಾತನಾಡಿದರು.

ಅನ್ನದಾನ ಶ್ರೇಷ್ಠ ದಾನ ಎಂದ ಶ್ರೀಗಳು, ತಂದೆ-ತಾಯಿ ಮತ್ತು ಗುರು ಸೇವೆ ಮರೆಯಬಾರದು ಎಂದರು.

ಸಂಕ್ರಾಂತಿಯ ಎಳ್ಳು - ಬೆಲ್ಲ, ಯುಗಾದಿಯ ಬೇವು - ಬೆಲ್ಲ ಮಾನವನ ಸುಖ - ದುಃಖದ ಸಂಕೇತ. ಈ ಸಂದರ್ಭದಲ್ಲಿ ಎರಡನ್ನೂ ಸಮಾನವಾಗಿ ಸ್ವೀಕರಿಸಿ, ಕಷ್ಟ ಬಂದಾಗ ಧೃತಿಗೆಡದೆ, ಧರ್ಮ ಮಾರ್ಗದಲ್ಲಿ ನಡೆದಾಗ ಪುಣ್ಯಪ್ರಾಪ್ತಿಯಾಗುತ್ತದೆ ಎಂದರು.

ಕಣ್ವಕುಪ್ಪೆ ಗವಿಮಠದ ಶ್ರೀಗಳು ಕೇದಾರದಲ್ಲಿಯೇ ಇರುತ್ತಾರೆ ಎಂಬ ಆತಂಕ ಬೇಡ ಎಂದ ಶ್ರೀಗಳು, ಕಣ್ವಕುಪ್ಪೆ ತಮಗೆ ಪ್ರಾಣ ಸ್ವರೂಪ, ಗುರುಗಳ ಆದೇಶದಂತೆ ತಾವು ವರ್ಷದಲ್ಲಿ ಒಂದೆರಡು ತಿಂಗಳುಗಳ ಕಾಲ ಕೇದಾರಕ್ಕೆ ಹೋಗಿ ಬರುವುದಾಗಿ ಹೇಳಿದರು.

ಜ್ಯೋತಿರ್ಲಿಂಗಗಳ ದರ್ಶನದಿಂದ ಪುಣ್ಯ ಪ್ರಾಪ್ತಿಯಾಗುತ್ತದೆ. ಅದರಲ್ಲೂ ಕೇದಾರನಾಥನ ದರ್ಶನದಿಂದ ಇತರೆ ಎಲ್ಲಾ ಜ್ಯೋತಿರ್ಲಿಂಗಗಳ ದರ್ಶನ ಭಾಗ್ಯ ದೊರೆತಂತಾಗುತ್ತದೆ. ಈ ಬಾರೀ ಕೇದಾರನಾಥನ ಸೇವೆ ಮಾಡುವ ಅವಕಾಶ ತಮಗೆ ದೊರೆತದ್ದು, ಪುಣ್ಯದ ಫಲ ಎಂದರು.

ಚಿತ್ರ ನಟ ಜಗ್ಗೇಶ್ ಮಾತನಾಡಿ, ಮಾನವನ ಆಸೆಗೆ ಮಿತಿ ಇಲ್ಲ. ಆಸೆಗಳನ್ನು ಬದಿಗೊತ್ತಿ ಧರ್ಮ ಕಾರ್ಯದ ಮೂಲಕ ಜೀವನದ ಬೆಳಕು ಕಂಡುಕೊಳ್ಳಬೇಕಿದೆ ಎಂದರು.

ಪ್ರತಿಯೊಬ್ಬರಿಗೂ ತಾಯಿಯೇ ನಿಜವಾದ ದೇವರು. ಅವಳ ಆಶೀರ್ವಾದದಿಂದ ಎಲ್ಲವೂ ಲಭ್ಯವಾಗುತ್ತದೆ. ನಮ್ಮ ಜೀವಿತದ ಕೊನೆಯಲ್ಲಿ ಇಹಲೋಕ ತ್ಯಜಿಸುವಾಗ ಯಾವುದು ನಮ್ಮ ಜೊತೆ ಬಾರದು. ನಾವು ಮಾಡಿದ ಪುಣ್ಯಕಾರ್ಯ ಮಾತ್ರ ನಮ್ಮ ಜೊತೆ ಬರುತ್ತದೆ. ಶ್ರೀಗಳನ್ನು ಪಡೆದ ಈ ಭಾಗದ ಜನ ನೀವೇ ಧನ್ಯರು ಎಂದರು.

ವಿಶ್ವ ಹಿಂದೂ ಪರಿಷತ್‌ನ ಉತ್ತರ ಕರ್ನಾಟಕದ ಪ್ರಮುಖರಾದ ಮನೋಹರ ಮಠದ್ ಅವರು ಮಾತನಾಡಿ, ನಾವೆಲ್ಲರೂ ಭಾರತೀಯರು, ನಾನೊಬ್ಬ ಹಿಂದೂ ಎಂಬ ಭಾವನೆ ಮುಖ್ಯ, ಸಾಮರಸ್ಯದ ನಾಡು ಕಟ್ಟಲು ಎಲ್ಲರೂ ಒಂದಾಗಬೇಕಿದೆ ಎಂದರು.

ಕಣ್ವಕುಪ್ಪೆ ಗವಿಮಠದ ಶ್ರೀಗಳು ಕಠಿಣವಾದ ಅನುಷ್ಠಾನದ ಮೂಲಕ ಅಗಾಧ ಶಕ್ತಿ ಹೊಂದಿದ್ದಾರೆ. ಮುಂದಿನ ದಿನಗಳಲ್ಲಿ ಅವರು ಜಗದ್ಗುರುಗಳಾಗಲಿದ್ದಾರೆ ಎಂದರು.

ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಫೆಬ್ರವರಿ ತಿಂಗಳಲ್ಲಿ 57 ಕೆರೆ ತುಂಬಿಸಲು, ಮಾರ್ಚ್‌ನಲ್ಲಿ ಭದ್ರಾ ನೀರಾವರಿ ಯೋಜನೆ ಕಾಮಗಾರಿಗೆ ಮುಖ್ಯಮಂತ್ರಿಗಳ ಮೂಲಕ ಚಾಲನೆ ನೀಡಲಾಗುವುದು ಎಂದರು. ಮಾಜಿ ಶಾಸಕ ಹೆಚ್. ಪಿ.ರಾಜೇಶ್ ಮಾತನಾಡಿದರು.

ಕಾರ್ಯಕ್ರಮದಲ್ಲಿ ಯುಗಧರ್ಮ ರಾಮಣ್ಣ ಹಾಗೂ ಮತ್ತಿತರರು ಭಾಗವಹಿಸಿದ್ದರು.

ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಸರಳ ಆಚರಣೆ

ದಾವಣಗೆರೆ, ಜ. 15- ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಶ್ರೀ ಶಿವಯೋಗಿ ಸಿದ್ದರಾಮೇಶ್ವರ ಜಯಂತಿಯನ್ನು ಶ್ರೀ ಶಿವಯೋಗಿ ಸಿದ್ದರಾಮೇಶ್ವರರ ಭಾವಚಿತ್ರಕ್ಕೆ ಪುಷ್ಪ ಅರ್ಪಿಸುವ ಮೂಲಕ ನಿನ್ನೆ ಸರಳವಾಗಿ ಆಚರಿಸಲಾಯಿತು.

ಶಾಸಕ ಎಸ್.ಎ ರವೀಂದ್ರನಾಥ್, ಜಿಲ್ಲಾ ಪಂಚಾಯತ್ ಅಧ್ಯಕ್ಷೆ ಯಶೋಧಮ್ಮ ಮರುಳಪ್ಪ, ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ, ಜಿ.ಪಂ ಉಪಕಾರ್ಯದರ್ಶಿ ಬಿ.ಆನಂದ, ತಹಶೀಲ್ದಾರ್ ಸಂತೋಷ್‌ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ರವಿಚಂದ್ರ, ಭೋವಿ ಸಮಾಜದ ಜಿಲ್ಲಾ ಅಧ್ಯಕ್ಷರಾದ ಬಿ.ಚೆ ಸಿದ್ದಪ್ಪ, ಕಾರ್ಯಾಧ್ಯಕ್ಷ ಹೆಚ್.ಜಯಣ್ಣ, ಕಾರ್ಯದರ್ಶಿ ಸಿದ್ದರಾಮಪ್ಪ, ಭೋವಿ ಸಮಾಜದ ಯುವ ಘಟಕದ ಕಾರ್ಯದರ್ಶಿ ಶಶಿಕುಮಾರ್, ಸಮಾಜದ ಮುಖಂಡರಾದ ಹೆಚ್. ಚಂದ್ರಣ್ಣ, ವಿ.ಗೋಪಾಲಪ್ಪ, ಗೋವಿಂದ ಜಿ, ಶ್ರೀನಿವಾಸ ಆರ್, ಸೋಮಶೇಖರ್, ಡಿ. ಕೇಶವಮೂರ್ತಿ, ವಿಜಯ್ ಕುಮಾರ್, ನಂದಕುಮಾರ್, ಸುರೇಶ್.ಆರ್, ಈಶ್ವರ್, ಸೋನು, ಚಂದ್ರು, ಗೋಪಾಲಪ್ಪ, ತಿಮ್ಮಣ್ಣ, ಟಿ.ರಾಜು ಮುಂತಾದವರು ಉಪಸ್ಥಿತರಿದ್ದರು.

ಸಚಿವ ಸಂಪುಟ ವಿಸ್ತರಣೆ ; ಸಿಎಂಗೆ ಪರಮಾಧಿಕಾರ

ದಾವಣಗೆರೆ, ಜ.15- ಸಚಿವ ಸಂಪುಟ ವಿಸ್ತರಣೆ ವಿಚಾರವಾಗಿ ಮುಖ್ಯಮಂತ್ರಿಗಳಿಗೆ ಪರಮಾಧಿಕಾರ ಇದೆ. ಅವರು ಯಾವಾಗ ಬೇಕೋ ಆವಾಗ ಮಾಡುತ್ತಾರೆ ಎಂದು ಸಚಿವ ಸಿ.ಟಿ. ರವಿ ತಿಳಿಸಿದರು. ನಗರದ ಜಿ ಎಂಐಟಿ ಹೆಲಿಪ್ಯಾಡ್ ನಲ್ಲಿ ನಿನ್ನೆ ಮಾಧ್ಯಮದವರೊಂದಿಗೆ ಮಾತನಾಡಿದರು.

ನಾನು ಡಿಸಿಎಂ ಸ್ಥಾನದ ಆಕಾಂಕ್ಷಿ ಅಲ್ಲ. ನನ್ನನ್ನು ನೋಡಿದ್ರೆ ಡಿಸಿಎಂ ಆಗಬೇಕು ಅನ್ನೋತರ ಅನ್ಸುತ್ತಾ ನಿಮ್ಗೆ ಎಂದು ಮಾಧ್ಯಮದವರ ಪ್ರಶ್ನೆಗೆ ಪ್ರತಿಕ್ರಿಯಿಸಿದರು. ತಮಗೆ ಸಿಕ್ಕಿರುವ ಖಾತೆಯ ಬಗ್ಗೆ ತೃಪ್ತಿ ಇದೆಯೇ ಎಂಬ ಮತ್ತೊಂದು ಪ್ರಶ್ನೆಗೆ ಉತ್ತರಿಸುತ್ತಾ, ಕೆಲಸ ಮಾಡುವವರಿಗೆ ಯಾವ ಖಾತೆ ಯಾದರೇನು, ಯಾವ ಖಾತೆ ಕೊಟ್ಟರೂ ತೃಪ್ತಿಯಿಂದ ಕೆಲಸ ಮಾಡ ಬೇಕೆಂಬ ತತ್ವದ ಮೇಲೆ ನಂಬಿಕೆ ನನಗಿದೆ. ಮನುಷ್ಯನಿಗೆ ತೀರದ ಆಸೆ ಇರುತ್ತೆ ಎಂದು ಹಲವು ಸ್ವಾಮೀಜಿಗಳು ಹೇಳಿದ್ದಾರೆಂದರು. ಸ್ವಾಮೀಜಿಗಳು ತಮ್ಮ ಸಮಾಜಕ್ಕೆ ಸಚಿವ ಸ್ಥಾನ ನೀಡುವಂತೆ ಒತ್ತಾಯಿಸುತ್ತಿರುವ ವಿಚಾರವಾಗಿ ಮಾತನಾಡಿದ ಸಿ.ಟಿ. ರವಿ, ಸ್ವಾಮೀಜಿಗಳು ಕೇಳುವುದು ಸರಿ ಇದೆ. ತಮ್ಮ ಸಮಾಜಕ್ಕಾಗಿ ಅವರು ಕೇಳುತ್ತಿದ್ದಾರೆ ಎಂದರು.

ನಗರದಲ್ಲಿ ಇಂದು ಟೆಸ್ಟ್ ಪರ್ಚೇಸ್, ಸಾರಿಗೆ ಸಾಗಣೆ ತೆರಿಗೆಯ ಜಾಗೃತಿ ಕಾರ್ಯಕ್ರಮ

ತೆರಿಗೆ ಸಲಹೆಗಾರರು, ವ್ಯಾಪಾರಸ್ಥರು ಮತ್ತು ಅಕೌಂಟೆಂಟ್ಸ್ ಗಳಿಗಾಗಿ ಟೆಸ್ಟ್ ಪರ್ಚೇಸ್ ಮತ್ತು ಸಾರಿಗೆ ಸಾಗಣೆಯ ಪರಿಶೀಲನೆಗೆ ಸಂಬಂಧಿಸಿದ ಜಾಗೃತಿ ಕಾರ್ಯಕ್ರಮವನ್ನು ಇಲಾಖೆಯಿಂದ ಆಯೋಜಿಸಲಾಗಿದೆ. ಜಿ. ಎಸ್.ಟಿ. ಉಲ್ಲಂಘನೆಯ ಕ್ರಮವಾಗಿ ಜಿ.ಎಸ್.ಟಿ. ಕಾಯ್ದೆಯ ಸೆಕ್ಷನ್ 122 ಮತ್ತು 129ರ ಅಡಿಯಲ್ಲಿ ದಂಡವನ್ನು ಆಕರ್ಷಿಸುವ ಬಗ್ಗೆ ಮಾಹಿತಿಯನ್ನು ವಾಣಿಜ್ಯ ತೆರಿಗೆ ಭವನದ ಸೆಮಿನಾರ್ ಹಾಲ್‌ನಲ್ಲಿ ಇಂದು ಹಮ್ಮಿಕೊಳ್ಳಲಾಗಿದೆ.

ಚಿದಾನಂದ ಮೂರ್ತಿ ನಿಧನಕ್ಕೆ ಕಸಾಪದಿಂದ ಶ್ರದ್ಧಾಂಜಲಿ

ದಾವಣಗೆರೆ, ಜ. 15- ಹಿರಿಯ ಸಂಶೋಧಕ ಡಾ. ಎಂ. ಚಿದಾನಂದಮೂರ್ತಿ ಅವರ ನಿಧನಕ್ಕೆ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಜಿಲ್ಲಾ ಕಸಾಪ ಅಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ ಕುರ್ಕಿ ಮಾತನಾಡಿ, ಕರ್ನಾಟಕದ ಸಾಂಸ್ಕೃತಿಕ ಪರಂಪರೆಯಲ್ಲಿ ಬಹುದೊಡ್ಡ ಸಂಶೋಧಕ, ಖ್ಯಾತ ಸಾಹಿತಿ, ಸತ್ಯದ ಪ್ರತಿಪಾದಕರು, ಶಿಲಾ ಶಾಸನಗಳ ಸಂರಕ್ಷಣೆ ಮತ್ತು ಸಂವರ್ಧನೆಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟವರು. ಯುವ ಸಂಶೋಧಕರಿಗೆ ಆದರ್ಶ ವ್ಯಕ್ತಿಯಾಗಿದ್ದ ಇವರ ಅಗಲಿಕೆಯಿಂದ ಕನ್ನಡ ಸಾಹಿತ್ಯ ಕ್ಷೇತ್ರ ಬಡವಾಗಿದೆ ಎಂದರು.

ನಿವೃತ್ತ ಪ್ರಾಂಶುಪಾಲ ಡಾ. ಮಲ್ಲಿಕಾರ್ಜುನ ಕಲಮರಹಳ್ಳಿ ಮಾತನಾಡಿ, 1988ರಲ್ಲಿ ಪಿಯುನಲ್ಲಿ ಕನ್ನಡವನ್ನು ಐಚ್ಛಿಕ ಭಾಷೆಯನ್ನಾಗಿ ಆರಂಭಿಸಲು ಚಿದಾನಂದಮೂರ್ತಿ ಕಾರಣಕರ್ತರು. ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಅಂದು ರೂ. 1,000 ನೀಡಿದ್ದರು ಎಂದು ಬಣ್ಣಿಸಿದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಎ.ಆರ್. ಉಜ್ಜಿನಪ್ಪ, ಗೌರವ ಕಾರ್ಯದರ್ಶಿ ಬಿ.ದಿಳ್ಳೆಪ್ಪ, ಕಾರ್ಯದರ್ಶಿ ಜಿ.ಆರ್. ಷಣ್ಮುಖಪ್ಪ, ತಾಲ್ಲೂಕು ಘಟಕದ ಅಧ್ಯಕ್ಷ ವಾಮದೇವಪ್ಪ, ತಾಲ್ಲೂಕು ಕಛೇರಿ ಕಾರ್ಯದರ್ಶಿ ಬಿ.ಎಂ. ಮುರಿಗೆಯ್ಯ, ಮಹಿಳಾ ಕಾರ್ಯದರ್ಶಿ ಎಸ್.ಎಂ. ಮಲ್ಲಮ್ಮ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಎಸ್.ಟಿ. ಶಾಂತಗಂಗಾಧರ್, ಕಾರ್ಮಿಕ ಮುಖಂಡ ರಾಘವೇಂದ್ರ ನಾಯರಿ, ಷಡಕ್ಷರಪ್ಪ, ಗೀತಾ ಬಸವರಾಜ್ ಇದ್ದರು.

ಗ್ರಾಮೀಣ ಪ್ರದೇಶದಲ್ಲಿನ ಜನರಿಗೆ ರಂಗ ತರಬೇತಿಗೆ ಆದ್ಯತೆ : ಡಾ. ಶೈಲಜ

ಪರಿಶಿಷ್ಟ ಜಾತಿಯವರಿಗೆ ರಂಗ ತರಬೇತಿ ಸಮಾರೋಪ

ದಾವಣಗೆರೆ, ಜ. 15- ಗ್ರಾಮೀಣ ಪ್ರದೇಶದಲ್ಲಿನ ಜನರಿಗೆ ರಂಗ ತರಬೇತಿ ಕಾರ್ಯಾಗಾರ ನೀಡಲು ಆದ್ಯತೆ ನೀಡುತ್ತಿರುವುದಾಗಿ ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಡಾ. ಶೈಲಜ ತಿಳಿಸಿದರು.

ನಗರದ ಚಿಂದೋಡಿ ಲೀಲಾ ಕಲಾ ಕ್ಷೇತ್ರದಲ್ಲಿ ಮೊನ್ನೆ ನಡೆದ ಗ್ರಾಮೀಣ ಪ್ರದೇಶದ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ರಂಗ ತರಬೇತಿ ಕಾರ್ಯಾಗಾರದ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡುತ್ತಿದ್ದರು.

ತರಬೇತಿ ಪಡೆದು ತಮ್ಮ ಸ್ಥಳಗಳಿಗೆ ತೆರಳಿ ನಂತರ ರಂಗ ಚಟುವಟಿಕೆಗಳಲ್ಲಿ ಹೆಚ್ಚಿನ ಆಸಕ್ತಿಯಿಂದ ಪಾಲ್ಗೊಂಡು ತಮ್ಮ ಕಲೆಯನ್ನು ಪ್ರದರ್ಶಿಸಬೇಕೆಂದು ಆಶಿಸಿದರು. ತರಬೇತಿಯ ಸಮಯದಲ್ಲಿ ವಿವಿಧ ಅಭಿರುಚಿಯ ಅಭ್ಯರ್ಥಿಗಳು ಒಂದೇ ಕುಟುಂಬದವರಂತೆ ಇದ್ದು, ಎಲ್ಲರೊಡನೆ ಸೌಹಾರ್ದತೆಯಿಂದ ತರಬೇತಿ ಪೂರ್ಣಗೊಳಿಸಿದ್ದಾರೆಂದು ಹರ್ಷ ವ್ಯಕ್ತಪಡಿಸಿದರು.

ಶೀಘ್ರದಲ್ಲಿಯೇ ಹಗರಿಬೊಮ್ಮನಹಳ್ಳಿಯಲ್ಲಿ ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಗೆ ರಂಗ ತರಬೇತಿ ಕಾರ್ಯಾಗಾರ ಹಮ್ಮಿಕೊಂಡಿರುವುದಾಗಿ ಹೇಳಿದರು.

ಹಿರಿಯ ವೈದ್ಯ ಡಾ. ಪಂಚಾಕ್ಷರಪ್ಪ ಅವರು, ದಾವಣಗೆರೆ ನಗರ ರಂಗಭೂಮಿಗೆ ಹೆಚ್ಚಿನ ಪ್ರೋತ್ಸಾಹ ನೀಡುತ್ತಾ ಬಂದಿದೆ. ಡಾ. ರಾಜ್ ಕುಮಾರ್ ಅಂತಹ ಮೇರುನಟರಿಂದ ಮೊದಲ್ಗೊಂಡು ಅನೇಕ ನಟರು - ನಟಿಯರು ಈ ನಗರದಲ್ಲಿ ನಾಟಕಗಳಲ್ಲಿ ಅಭಿನಯಿಸಿ ಯಶಸ್ಸು ಗಳಿಸಿದ್ದಾರೆ ಎಂದು ತಿಳಿಸಿದರು.

ಕರ್ನಾಟಕ ನಾಟಕ ಅಕಾಡೆಮಿ ಸದಸ್ಯರು, ಕಲಾವಿದರಾದ ಯಶವಂತ ಸರದೇಶಪಾಂಡೆ ಅವರು ನಾಟಕಗಳ ಪ್ರದರ್ಶನಗಳ್ನು ಹೆಚ್ಚು ಹೆಚ್ಚಾಗಿ ರಾಜ್ಯಾದ್ಯಂತ ನಡೆಸಲು ಹಾಗೂ ಕಲಾವಿದರನ್ನು ಪ್ರೋತ್ಸಾಹಿಸಲು ನಾಟಕ ಅಕಾಡೆಮಿ ಮುಂದಾಗಿದೆ ಎಂದು ತಿಳಿಸಿದರು.

ಕಲಾವಿದರನ್ನು ಬೆಳಕಿಗೆ ತರಲು ನಾಟಕ ಅಕಾಡೆಮಿ ಶ್ರಮಿಸುತ್ತಿದ್ದು, ಕಲೆಯ ಅಭಿರುಚಿಯುಳ್ಳವರು ತರಬೇತಿಯ ಪ್ರಯೋಜನ ಪಡೆದು, ಉತ್ತಮ ಕಲಾವಿದರಾಗಲು ಮುಂದಾಗಬೇಕೆಂದು ಹೇಳಿದರು.

ತರಬೇತಿ ನೀಡಿದ ನಿರ್ದೇಶಕ ಸಿದ್ಧರಾಜು ಅವರು, ವಿಧ ಜಿಲ್ಲೆಗಳಿಂದ ತರಬೇತಿಗೆ ಆಗಮಿಸಿದ ಅಭ್ಯರ್ಥಿಗಳು ಪರಿಶ್ರಮದಿಂದ ತರಬೇತಿ ಪಡೆದಿದ್ದಾರೆ ಎಂದರು.ಅಭ್ಯರ್ಥಿಗಳು ದ.ರಾ. ಬೇಂದ್ರೆಯವರ ಸಾಯೋ ಆಟ ನಾಟಕವನ್ನು ಅಭಿನಯಿಸಿದರು.

ದಾವಣಗೆರೆ - ಹರಿಹರದಲ್ಲಿ ಸಂಭ್ರಮದ ಸಂಕ್ರಾಂತಿ

ದಾವಣಗೆರೆಯ ಉದ್ಯಾನವನವೊಂದರಲ್ಲಿ ಮಕರ ಸಂಕ್ರಾಂತಿಯ ಸಂಭ್ರಮ

ಸಂಕ್ರಾಂತಿ ಹಬ್ಬದ ಪ್ರಯುಕ್ತ ಹರಿಹರದ ತುಂಗಭದ್ರಾ ನದಿ ತೀರದಲ್ಲಿ ಜನತೆ ಭೋಜನ ಸವಿದರು

ದಾವಣಗೆರೆ, ಜ. 15- ನಗರದಲ್ಲಿ ಮಕರ ಸಂಕ್ರಾಂತಿಯನ್ನು ಸಡಗರ-ಸಂಭ್ರಮದಿಂದ ಆಚರಿಸಲಾಯಿತು. ಜನತೆ ಮನೆಗಳಲ್ಲಿ ಸಿಹಿ ಅಡುಗೆ ಮಾಡಿ, ದೇವಾಲಯಗಳಿಗೆ ತೆರಳಿ ದೇವರ ದರ್ಶನ ಮಾಡಿದರು. ಸ್ನೇಹಿತರಿಗೆ, ಸಂಬಂಧಿಕರಿಗೆ ಎಳ್ಳು-ಬೆಲ್ಲ ಹಂಚಿ ಪರಸ್ಪರ ಶುಭಾಶಯ ಕೋರಿದರು.

ಉದ್ಯಾನವನಗಳಲ್ಲಿ ಜಾತ್ರೆ: ಸಂಕ್ರಾಂತಿ ಅಂಗವಾಗಿ ನಗರದ ಉದ್ಯಾನ ವನಗಳು ಜನರಿಂದ ತುಂಬಿ ಹೋಗಿದ್ದವು. ಬೆಳಿಗ್ಗೆಯಿಂದಲೇ ನಗರದ ಜನತೆ ವಿವಿಧ ಬಗೆಯ ತಿಂಡಿ, ತನಿಸು, ಊಟ ತಯಾರಿಸಿಕೊಂಡು ಆಟೋ, ಬಸ್ಸುಗಳ ಮೂಲಕ ಪಾರ್ಕುಗಳಿಗೆ ಬಂದಿಳಿಯುತ್ತಿದ್ದುದು ಸಾಮಾನ್ಯವಾಗಿತ್ತು.

ಪಾರ್ಕುಗಳಲ್ಲಿ ಚಾಪೆ ಹಾಸಿಕೊಂಡು ಮನೆ ಮಂದಿಯೆಲ್ಲಾ ಊಟದ ಸವಿ ಉಂಡರೆ, ಚಿಕ್ಕ ಮಕ್ಕಳು ಹುಲ್ಲು ಹಾಸಿನ ಮೇಲೆ ಹಾಗೂ ಪಾರ್ಕುಗಳಲ್ಲಿದ್ದ ಆಟಿಕೆಗಳಲ್ಲಿ ಆಟವಾಡಿ ಸಂಕ್ರಾಂತಿಯ ಮಜಾ ಅನುಭವಿಸಿದರು. ಪಾರ್ಕುಗಳ ಮುಂಭಾಗ ಮಜ್ಜಿಗೆ, ಐಸ್ ಕ್ರೀಂ, ಕಡ್ಲೇಪುರಿ, ಚಿಪ್ಸ್ ಮತ್ತಿತರೆ ತಿಂಡಿಗಳಿಗೆ ವಿಶೇಷ ಬೇಡಿಕೆ ಇತ್ತು.

ತುಂಗಾ ತಟದಲ್ಲಿ ಸಂಭ್ರಮ: ಹರಿಹರ ನಗರದ ತುಂಗಭದ್ರಾ ನದಿಯ ದಡದಲ್ಲಿ ಸಡಗರ ಸಂಭ್ರಮದಿಂದ ಮಕರ ಸಂಕ್ರಾಂತಿಯ ಹಬ್ಬ ಆಚರಣೆ ಮಾಡಲಾಯಿತು.

ಜಿಲ್ಲೆಯ ಮತ್ತು ಪಕ್ಕದ ಹಾವೇರಿ, ಬಳ್ಳಾರಿ, ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಯ ಸಾರ್ವಜನಿಕರು ಮತ್ತು ರೈತಾಪಿ ವರ್ಗದ ಜನರು ನಗರದ ಪ್ರಸಿದ್ಧ ತುಂಗಭದ್ರಾ ನದಿಯಲ್ಲಿ ಜಳಕ ಮಾಡಿ ಗಂಗಾಮಾತೆಗೆ ವಿಶೇಷವಾದ ಪೂಜೆಯನ್ನು ಸಲ್ಲಿಸಿದರು.

ತಾವು ತಂದಿದ್ದ ರೊಟ್ಟಿ, ಚಪಾತಿ, ಸಜ್ಜೆ ರೊಟ್ಟಿ, ಕಡಲೆ, ಕುರಶಿಣಿ, ಶೇಂಗಾ ಮುಂತಾದ ಚಟ್ನಿ ಪುಡಿ ವಿವಿಧ ತರಕಾರಿ ಪದಾರ್ಥಗಳ ಪಲ್ಯ, ಕೆನೆಮೊಸರು, ಸೌತೆಕಾಯಿ, ಮೂಲಂಗಿ, ಮತ್ತು ವಿವಿಧ ಬಗೆಯ ಸಿಹಿಯಾದ ಆಹಾರ ಪದಾರ್ಥಗಳನ್ನು ಸೇವಿಸುವ ಮೂಲಕ ಹಬ್ಬ ಆಚರಿಸಿದರು.

ಬಿಸಿಲಿನ ತಾಪ ತಡೆಯಲು ಆಗದೇ ಸಾರ್ವಜನಿಕರು ಹಣ್ಣಿನ ಜ್ಯೂಸ್, ತಂಪಾದ ಪಾನೀಯ, ಎಳನೀರು ಕುಡಿದು ಜೊತೆಯಲ್ಲಿ ಐಸ್ ಕ್ರೀಮ್ ಸೇವಿಸಿದರು. ನದಿಯಲ್ಲಿ ಈ ಬಾರಿ ಹರಿಯುವ ನೀರಿನ ಪ್ರಮಾಣ ಅಷ್ಟಾಗಿ ಇರಲಿಲ್ಲ. ಜೊತೆಗೆ ಪಂಚಮಸಾಲಿ ಗುರುಪೀಠದ ಆವರಣದಲ್ಲಿ ಹರ ಜಾತ್ರಾ ಮಹೋತ್ಸವ ಇರುವುದರಿಂದ ಸಾರ್ವಜನಿಕರು ಈ ಬಾರಿ ಅಷ್ಟಾಗಿ ನದಿಯಲ್ಲಿ ಇರಲಿಲ್ಲ.

ನದಿಯ ದಂಡೆಯಲ್ಲಿ ಹೋಟೆಲ್, ಬೀಡಿ ಸಿಗರೇಟು ಮತ್ತು ಮಕ್ಕಳಿಗೆ ಬೇಕಾಗುವ ಆಟಿಕೆಯ ವಸ್ತುಗಳ ಅಂಗಡಿಗಳಲ್ಲಿ ವ್ಯಾಪಾರ ವಹಿವಾಟು ಈ ಬಾರಿ ಅಂತ ಪ್ರಮಾಣದಲ್ಲಿ ಕಾಣಲಿಲ್ಲ. ನದಿಯ ದಡದಲ್ಲಿರುವ ಶ್ರೀ ಅಯ್ಯಪ್ಪ ಸ್ವಾಮಿ ಮಠ, ರಾಘವೇಂದ್ರ ಸ್ವಾಮಿಗಳ ಮಠ, ಶ್ರೀ ಹರಿಹರೇಶ್ವರ ದೇವಾಲಯದಲ್ಲಿ ಮಕರ ಸಂಕ್ರಾಂತಿ ವಿಶೇಷ ಪೂಜೆಯನ್ನು ಮಾಡಲಾಗಿತ್ತು. ಈ ಮೂರು ದೇವಸ್ಥಾನದ ಬಳಿ ಜನರು ಹೆಚ್ಚಿನ ಪ್ರಮಾಣದಲ್ಲಿ ಮಕರ ಸಂಕ್ರಾಂತಿಗೆ ಆಗಮಿಸಿ ವಿಶೇಷ ಪೂಜೆಯಲ್ಲಿ ಪಾಲ್ಗೊಂಡು ನಂತರದಲ್ಲಿ ನದಿಯ ದಂಡೆಯಲ್ಲಿ ತಮ್ಮ ಆಹಾರವನ್ನು ಸೇವನೆ ಮಾಡಿ, ನಂತರದಲ್ಲಿ ಎಳ್ಳು ಬೆಲ್ಲವನ್ನು ವಿನಿಮಯ ಮಾಡಿಕೊಂಡು ಸಂಕ್ರಾಂತಿ ಆಚರಣೆ ಮಾಡಿದರು.

ಪಿಎಸ್ಐ ಎಸ್ ಶೈಲಾಶ್ರೀ ಮತ್ತು ಪೊಲೀಸ್ ಸಿಬ್ಬಂದಿಗಳು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಸೂಕ್ತ ಬಂದೋಬಸ್ತು ಮಾಡಿದ್ದರು.

ಕೌಶಲ್ಯಾಭಿವೃದ್ಧಿಯಿಂದ ರಾಷ್ಟ್ರ ಬಲಿಷ್ಠವಾಗಲು ಸಾಧ್ಯ

ಕುವೆಂಪು ವಿವಿ ಕುಲಪತಿ ಪ್ರೊ. ಬಿ.ಪಿ. ವೀರಭದ್ರಪ್ಪ ಅಭಿಮತ

ದಾವಣಗೆರೆ, ಜ. 15- ಕೌಶಲ್ಯಾಭಿವೃದ್ಧಿಯಿಂದ ರಾಷ್ಟ್ರ ಬಲಿಷ್ಠವಾಗಲು ಸಾಧ್ಯವಿದ್ದು, ಇದು ಎಲ್ಲಾ ಕ್ಷೇತ್ರಗಳಲ್ಲೂ ಆಗಬೇಕಿದೆ. ಶಿಕ್ಷಣ ರಂಗವೂ ಇದಕ್ಕೆ ಹೊರತಲ್ಲ ಎಂದು ಕುವೆಂಪು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಬಿ.ಪಿ. ವೀರಭದ್ರಪ್ಪ ಅಭಿಪ್ರಾಯಪಟ್ಟರು.

ನಗರದ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ವಿಜ್ಞಾನ ಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿ ವೇದಿಕೆ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಶಿಕ್ಷಣದ ವಸ್ತುಗಳು ಪ್ರಾಮಾಣಿಕವಾಗಿ ಪಾಲನೆಯಾಗಬೇಕು. ಭಾರತದ ಭವಿಷ್ಯವು ಯುವಜನತೆಯ ಕೈಯಲ್ಲಿದೆ. ಪ್ರತಿ ಯುವ ವಿದ್ಯಾರ್ಥಿಯೂ ತಾನೊಬ್ಬ ವ್ಯಕ್ತಿ ಎಂದು ಭಾವಿಸದೇ, ತಾನೊಂದು ಸಂಸ್ಥೆ ಎಂದು ಭಾವಿಸಿ ಉತ್ತಮ ಕೆಲಸಗಳನ್ನು ಮಾಡಬೇಕು.ದೇಶದ ಜನಸಂಖ್ಯೆಯಲ್ಲಿ ಕನಿಷ್ಠ ಶೇಕಡಾ ಮೂವತ್ತರಷ್ಟು ಮಂದಿಯಾದರೂ ಉನ್ನತ ಶಿಕ್ಷಣ ಹೊಂದುವಂತಾಗಬೇಕು ಎಂದರು.

ಮುಖ್ಯ ಅತಿಥಿಯಾಗಿ ಪಾಲ್ಗೊಂಡಿದ್ದ ಬಾಪೂಜಿ ವಿದ್ಯಾಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಕಿರುವಾಡಿ ಗಿರಿಜಮ್ಮ ಮಾತನಾಡಿ, ವಿದ್ಯಾರ್ಥಿಗಳು ಅನ್ಯ ವಿಷಯಗಳತ್ತ ಗಮನ ಹರಿಸದೇ ಜ್ಞಾನಾರ್ಜನೆಯ ಏಕ ಗುರಿ ಹೊಂದಬೇಕು ಎಂದರು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯ ಕಾಲೇಜು ಅಧ್ಯಾಪಕರ ಒಕ್ಕೂಟದ ಮಾಜಿ ಅಧ್ಯಕ್ಷ ಪ್ರೊ. ಸಿ.ಹೆಚ್. ಮುರಿಗೇಂದ್ರಪ್ಪ ಮಾತನಾಡಿ, ಸಮಯ ಪಾಲನೆ, ಸಂಯಮ ವಿದ್ಯಾರ್ಥಿಗಳಲ್ಲಿ ಅತ್ಯವಶ್ಯ ಎಂದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಎಂ.ಪಿ. ರುದ್ರಪ್ಪನವರು ಅಧ್ಯಕ್ಷೀಯ ನುಡಿಗಳನ್ನಾಡಿ, ವಿಜ್ಞಾನ ವಿಷಯವು ಅಧ್ಯಯನಕ್ಕೆ ಅತ್ಯಂತ ಆಸಕ್ತಿದಾಯಕ ಎಂದರು.

ಕಾಲೇಜಿನ ಹಳೆಯ ವಿದ್ಯಾರ್ಥಿಗಳಾದ ಡಾ. ಸ್ವಾತಿ ಮುತ್ತು ಹಾಗೂ ಶಕೀಬ್ ಅಹ್ಮದ್ ತಮ್ಮ ವಿದ್ಯಾರ್ಥಿ ಜೀವನದ ಶೈಕ್ಷಣಿಕ ಅನುಭವ ನೆನಪಿಸಿಕೊಂಡರು.

ದಿವ್ಯ, ದೀಪ, ಕೀರ್ತನಾ, ನೂರ್ ಫಾತಿಮಾ, ಮಾನಸ ಮತ್ತು ಚೈತ್ರಾ ನಿರೂಪಿಸಿದ ಕಾರ್ಯಕ್ರಮದಲ್ಲಿ ಮೇಘನ, ರಾಜೇಶ್ವರಿ ಪ್ರಾರ್ಥಿಸಿದರು. ಅಮೃತ ಸ್ವಾಗತಿಸಿದರು. ಅಧ್ಯಾಪಕಿ ಶರ್ಮಿಳಾ ವಾರ್ಷಿಕ ವರದಿ ಓದಿದರು. ಭವ್ಯ, ಸಚಿನ್, ಅಭಿಷೇಕ್ ಮುಖ್ಯ ಅತಿಥಿಗಳ ಪರಿಚಯ ಮಾಡಿದರು.

ಅಧ್ಯಾಪಕರುಗಳಾದ ಮರುಳಸಿದ್ದಪ್ಪ, ವಿಜಯಕುಮಾರ್, ಶೋಭಾ, ಕವಿತಾ ಬಹುಮಾನ ವಿತರಿಸಿದರು. ಕ್ರೀಡಾ ಸಾಧನೆಗೈದ ವಿದ್ಯಾರ್ಥಿಗಳಾದ ದರ್ಶನ್ ಮತ್ತು ಯೋಗಾಕ್ಷಿಯವರನ್ನು ಸನ್ಮಾನಿಸಲಾಯಿತು. ತೃಪ್ತಿ ಶಿವಾಜಿ ಕಟ್ಟಿ ವಂದಿಸಿದರು.

ಆಸ್ತಿ ವರ್ಗಾಯಿಸಲು ಬದ್ಧ

(3ನೇ ಪುಟದಿಂದ) ಶಾಖಾಮಠದಲ್ಲಿ ಮಠದ ಉಸ್ತುವಾರಿ ನೋಡಿಕೊಳ್ಳುತ್ತಿದ್ದ ಮುಮ್ಮಡಿ ಬಸವರಾಜ ದೇಶಿಕೇಂದ್ರ ಸ್ವಾಮೀಜಿಯವರನ್ನು ಉತ್ತರಾಧಿಕಾರಿಯಾಗಿ ನೇಮಕ ಮಾಡುವಂತೆ ಸೂಚಿಸಿದ್ದೇವೆ. ಇದಕ್ಕೆ ಎಲ್ಲರೂ ಒಪ್ಪಿಗೆ ಸೂಚಿಸಿ, ಅವರನ್ನು ಪೀಠಾಧಿಪತಿಗಳನ್ನಾಗಿ ನೇಮಕ ಮಾಡಿದ್ದಾರೆ ಎಂದರು.

2017 ನವೆಂಬರ್ 02 ರಂದು ದಾವಣಗೆರೆ ನೋಟರಿಯವರ ಎದುರು ಮಠದ ಎಲ್ಲಾ ಜಮೀನು, ಆಸ್ತಿಪಾಸ್ತಿ, ವಿದ್ಯಾಸಂಸ್ಥೆಗಳನ್ನು ಜಿಪಿಎ ಮಾಡಿಕೊಟ್ಟು ಬಂದಿದ್ದೇನೆ. ನಂತರ ನಂದಿಗುಡಿ ಮಠವನ್ನು ಶಾಶ್ವತವಾಗಿ ತ್ಯಜಿಸಿ ಸಾಗರ ನಗರದಲ್ಲಿ ಸಾಮಾನ್ಯ ಜೀವನ ನಡೆಸುತ್ತಿದ್ದೇನೆ ಎಂದು ತಿಳಿಸಿದರು. 2014ರಲ್ಲಿ ಸೊರಬ ನ್ಯಾಯಾಲಯಕ್ಕೆ ಹಾಜರಾಗಿ ಮಠದ 62 ಎಕರೆ ಜಮೀನು ಸೇರಿದಂತೆ ಎಲ್ಲಾ ಆಸ್ತಿಪಾಸ್ತಿಗಳನ್ನು ಈಗಿನ ಶ್ರೀಗಳ ಹೆಸರಿಗೆ ಇದ್ದಲ್ಲಿ ಅದನ್ನು ಈಗಿನ ಶ್ರೀಗಳ ಹೆಸರಿಗೆ ವರ್ಗಾಯಿಸಲು ನಾನು ಈಗಲೂ ಬದ್ಧನಿದ್ದೇನೆ ಎಂದರು.

ಇಂದೂಧರ ಎಂಬ ವ್ಯಕ್ತಿಗೂ ನನಗೂ ಯಾವುದೇ ಸಂಬಂಧವಿಲ್ಲ. ಅವರು ಮಠದ ಭಕ್ತರಲ್ಲಿ ಒಬ್ಬರಾಗಿದ್ದಾರೆ. ಅವರು ನ್ಯಾಯಾಲಯದಲ್ಲಿ ದಾವೆ ಹೂಡಿರುವುದು ಸಹ ನನಗೆ ಗೊತ್ತಿಲ್ಲ ಎಂದು ಹೇಳಿದರು. ವಕೀಲರಾದ ಕೆ.ಹೆಚ್. ಸುದರ್ಶನ್ ಹಾಜರಿದ್ದರು.

ಮಾರ್ಚ್ 5ರಂದೇ ಬಜೆಟ್ ಮಂಡನೆ

ಮುಖ್ಯಮಂತ್ರಿ

ದಾವಣಗೆರೆ, ಜ.15- ಮಾರ್ಚ್ 5ರಂದೇ ರಾಜ್ಯ ಬಜೆಟ್ ಮಂಡಿಸಲಾಗುವುದು ಎಂದು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ಅವರು, ಹರಿಹರದಲ್ಲಿನ ಹರ ಜಾತ್ರೆಗೆ ತೆರಳುವ ಮುನ್ನ ನಗರದ ಜಿಎಂಐಟಿ ಹೆಲಿಪ್ಯಾಡ್ ನಲ್ಲಿ ಮಾಧ್ಯಮದವರ ಜೊತೆ ಮಾತನಾಡಿದ ಅವರು, ರೈತನ ಮಗನಾದ ನಾನು ರೈತರ, ಸಾಮಾನ್ಯ ಜನರ ಕಷ್ಟಗಳ ಬಗ್ಗೆ ಅರಿವಿದೆ. ಸಹಜವಾಗಿ ಕೃಷಿಗೆ ಆದ್ಯತೆ ಕೊಡುತ್ತೇನೆ. ರೈತಪರ ಬಜೆಟ್ ಮಂಡಿಸುತ್ತೇನೆಂದರು.

ಹಣಕಾಸಿನ ಪರಿಸ್ಥಿತಿ ನೋಡಿಕೊಂಡು ಆಯವ್ಯಯ ಮಂಡನೆ ಮಾಡುತ್ತೇನೆ. ಏನು ಮಾಡಲು ಸಾಧ್ಯವೋ ಅದನ್ನು ಮಾಡುತ್ತೇನೆ ಎಂದರು. ರೈತರಿಗೆ ಪ್ರತ್ಯೇಕ ಬಜೆಟ್ ಮಂಡಿಸಲಾಗುತ್ತದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸುತ್ತಾ, ಅದು ಇನ್ನೂ ನಿರ್ಧಾರ ಆಗಿಲ್ಲ ಎಂದರು.

ಇಂದು ಸಿಎಂ ಜೊತೆ ನಿರಾಣಿ ಸುಳಿವಿಲ್ಲ: ನಿನ್ನೆ ಸಿಎಂ ಯಡಿಯೂರಪ್ಪ ಅವರ ಹಿಂದೆಯೇ ಸುಳಿದಾಡುತ್ತಿದ್ದ ಶಾಸಕ ಮುರುಗೇಶ್ ನಿರಾಣಿ ಇಂದು ಬಿಎಸ್‌ವೈ ಆಗಮನದ ವೇಳೆ ಜಿಎಂಐಟಿ ಹೆಲಿಪ್ಯಾಡ್ ಗೆ ಆಗಮಿಸಿರಲಿಲ್ಲ. ಇದರಿಂದ ಸಿಎಂ ಮೇಲೆ ಮುರುಗೇಶ್ ನಿರಾಣಿ ಮುನಿಸಿಕೊಂಡರಾ ಎಂಬ ಅನುಮಾನ ಕಾಡತೊಡಗಿದೆ.

ನಿನ್ನೆ ಹರಿಹರದ ಪಂಚಮಸಾಲಿ ಪೀಠಾಧ್ಯಕ್ಷ ವಚನಾನಂದ ಶ್ರೀಗಳು, ಮುರುಗೇಶ್ ನಿರಾಣಿಗೆ ಸಚಿವ ಸ್ಥಾನ ನೀಡುವಂತೆ ಸಿಎಂ ಸಮ್ಮುಖದಲ್ಲಿ ಒತ್ತಾಯಿಸಿದ್ದರು. ಇದು ಯಡಿಯೂರಪ್ಪ ಅವರನ್ನು ಕೆಂಡಾಮಂಡಲರಾಗುವಂತೆ ಮಾಡಿತ್ತು. ಈ ವೇಳೆ ಶ್ರೀಗಳ ಎದುರೇ ಸಿಎಂ ಯಡಿಯೂರಪ್ಪ ಅವರು ನಿರಾಣಿ ಮೇಲೆ ಕೋಪಗೊಂಡಿದ್ದರು. ಹೀಗಾಗಿ ಇಂದು ದಾವಣಗೆರೆಗೆ ಬಂದಿದ್ದರೂ ಮುರುಗೇಶ್ ನಿರಾಣಿ ಹೆಲಿಪ್ಯಾಡ್ ಗೆ ಆಗಮಿಸದೇ ಬೇಸರ ತೋರ್ಪಡಿಸಿದ್ದಾರೆ ಎನ್ನಲಾಗಿದೆ.

ಉಕ್ಕಡಗಾತ್ರಿಯಲ್ಲಿ ಸಂಭ್ರಮದ ಸಂಕ್ರಾಂತಿ ಆಚರಣೆ

ಮಲೇಬೆನ್ನೂರು, ಜ.15- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಮಕರ ಸಂಕ್ರಾಂತಿ ಹಬ್ಬವನ್ನು ರಾಜ್ಯದ ನಾನಾ ಭಾಗಗಳಿಂದ ಬಂದಿದ್ದ ಜನ ಸಂಭ್ರಮದಿಂದ ಆಚರಿಸಿದರು. ತುಂಗಭದ್ರಾ ನದಿಯಲ್ಲಿ ಪುಣ್ಯ ಸ್ನಾನ ಮಾಡಿ, ಗಂಗಾ ಪೂಜೆ ನೆರವೇರಿಸಿ, ಅಜ್ಜಯ್ಯನ ದರ್ಶನ ಪಡೆದ ನಂತರ ಜನರು ತಾವು ಮನೆಯಿಂದ ತಂದಿದ್ದ ಬುತ್ತಿ ಊಟ ಮಾಡಿ ಸಂಭ್ರಮಿಸಿದರು.

ಡಿ.ಕೆ. ಶಿವಕುಮಾರ್ ಅಭಿಮಾನಿಗಳ ಬಳಗದ ಅಧ್ಯಕ್ಷರಾಗಿ ಮಂಜುನಾಥ್ ಎನ್. ಆಯ್ಕೆ

ದಾವಣಗೆರೆ ಜಿಲ್ಲಾ ಡಿ.ಕೆ. ಶಿವಕುಮಾರ್ ಅಭಿಮಾನಿಗಳ ಬಳಗಕ್ಕೆ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಕಾರ್ಯಕರ್ತ **ಮಂಜುನಾಥ್ ಎನ್.** ಇವರು ಆಯ್ಕೆಯಾಗಿದ್ದಾರೆ.

ಜಾನಪದ ಸಾಹಿತ್ಯ ನೈಜ ಅನುಭವದ ಕಣಜ

ಶಿವಗೋಷ್ಠಿಯಲ್ಲಿ ಹಿರೇಕೋಗಲೂರು ಶರಣಪ್ಪ

ದಾವಣಗೆರೆ, ಜ.15- ಜಾನಪದ ಸಾಹಿತ್ಯ ಹುಡುಗಾಟದ ಮಾತುಗಳಲ್ಲ. ಅದು ನೈಜ ಬದುಕನ್ನು ತಿಳಿಸುವ ಅನುಭವದ ಕಣಜ ಎಂಬ ಮಾತುಗಳನ್ನು ಚನ್ನಗಿರಿ ತಾಲ್ಲೂಕು ಹಿರೇಕೋಗಲೂರಿನ ಕೃಷಿಕ ಶರಣಪ್ಪ ಹೇಳಿದರು.

ನಗರದ ತರಳಬಾಳು ಬಡಾವಣೆಯ ಶಿವಕುಮಾರಸ್ವಾಮಿ ಮಹಾಮಂಟಪದಲ್ಲಿ ಶಿವಗೋಷ್ಠಿ ಸಮಿತಿ ಹಾಗೂ ಸಾದರ ನೌಕರರ ಬಳಗದ ಸಹಯೋಗದಲ್ಲಿ ಶಿರಮಗೊಂಡನಹಳ್ಳಿ ಲಿಂ. ಗೌಡ್ರ ಸಿದ್ದಮ್ಮ, ಲಿಂ. ಪಟೇಲ್ ಸಿದ್ದಪ್ಪನವರ ಸ್ಮರಣಾರ್ಥ ಹಮ್ಮಿಕೊಂಡಿದ್ದ ಶಿವಗೋಷ್ಠಿ 284-ಸ್ಮರಣೆ-56 ಕಾರ್ಯಕ್ರಮದಲ್ಲಿ ಜಾನಪದ ಸಂಸ್ಕೃತಿ ವಿಷಯ ಕುರಿತು ಅವರು ಮಾತನಾಡಿದರು.

ಜಾನಪದ ಸಾಹಿತ್ಯ ಎಲ್ಲ ಸಾಹಿತ್ಯಕ್ಕೂ ತಾಯಿ ಬೇರಾಗಿದೆ. ಮಹಾಭಾರತವನ್ನು ಮೂರೇ ಸಾಲಿನಲ್ಲಿ ಹಿಡಿದಿಟ್ಟಿರುವ ಸಾಹಿತ್ಯ ಜಾನಪದ. ಜಾನಪದರು ಪ್ರಕೃತಿಯನ್ನೇ ದೇವರೆಂದು ಆರಾಧಿಸಿದವರು. ತಮ್ಮ ದುಡಿಮೆಯ ವೇಳೆ ಶ್ರಮದ ನೋವನ್ನು ಮರೆಯುವ ನಿಟ್ಟಿನಲ್ಲಿ ಅಕ್ಷರ ಚಮತ್ಕಾರವನ್ನು ಕಟ್ಟಿಕೊಟ್ಟವರು ಜಾನಪದರು. ಮನಸ್ಸಿನ ರಂಜನೆಗೆ ಒಗಟುಗಳನ್ನು ರಚಿಸಿದರು. ಹಾಸ್ಯ ಮಿಶ್ರಿತ ಸಾಹಿತ್ಯದ ಮೂಲಕ ಜೀವನದ ಸಂಸ್ಕಾರವನ್ನು ತಿಳಿ ಹೇಳಿದ್ದು ಜಾನಪದ ಎಂಬುದನ್ನು ಹಲವು ಉದಾಹರಣೆಗಳನ್ನು ನೀಡುವ ಮೂಲಕ ಮನದಟ್ಟು ಮಾಡಿಸಿದರು.

ಜಾನಪದರು ಯಾವುದೇ ವಿಶ್ವವಿದ್ಯಾನಿಲಯದಲ್ಲಿ ಓದಿದವರಲ್ಲ. ಆದರೆ ಅನುಭವವನ್ನೇ ತಮ್ಮ ನುಡಿಗಳಲ್ಲಿ ಹೇಳಿದರು. ಬದುಕು ಹೀಗೆ ಇರಬೇಕೆಂದು ಕನಸು ಕಂಡು, ಹಾಗೇ ಬದುಕಿದವರು. ನಮ್ಮ ನಡೆ, ನುಡಿ, ಗುರು-ಹಿರಿಯರನ್ನು ಕಾಣುವ ಪರಿ, ಹೆಣ್ಣು ತನ್ನ ಸಂಸಾರವನ್ನು ನಿಭಾಯಿಸುವ ಪರಿ, ಹೀಗೆ ಪ್ರತಿಯೊಂದನ್ನು ತಮ್ಮ ಸಾಹಿತ್ಯದ ಮೂಲಕ ಹೇಳಿ, ಸಾಮಾಜಿಕ ಜವಾಬ್ದಾರಿ ಮೆರೆದಿದ್ದಾರೆ ಎಂದು ತಿಳಿಸಿದರು.

ವೇದಿಕೆ ಅಧ್ಯಕ್ಷತೆಯನ್ನು ಸಾಹಿತಿ ಎಸ್.ಟಿ. ಶಾಂತಗಂಗಾಧರ್ ವಹಿಸಿದ್ದರು. ಲಿಂಗೈಕ್ಯರ ಸ್ಮರಣೆಯನ್ನು ಕಾಡಾ ಮಾಜಿ ನಿರ್ದೇಶಕ ಹಂಚಿನಮನೆ ಬಸವರಾಜಪ್ಪ ಮಾಡಿದರು. ಸಿದ್ದಪ್ಪನವರ ಪುತ್ರ ಅಜ್ಜಪ್ಪ ಹಾಗೂ ಶಿವಾನಂದಪ್ಪನವರು ತಮ್ಮ ತಂದೆ, ತಾಯಿಗಳ ಸೇವೆ, ತ್ಯಾಗವನ್ನು ಸ್ಮರಿಸಿದರು.

ಕದಳಿ ಮಹಿಳಾ ವೇದಿಕೆ ಸದಸ್ಯೆಯರು ವಚನ ಗಾಯನ ಹಾಡಿದರು. ಎನ್. ಅಜ್ಜಪ್ಪ ತಾಯಿ ಕುರಿತ ಹಾಡನ್ನು ಹಾಡಿದರು. ಪ್ರಸಾದ ಸೇವೆಯನ್ನು ಮಾಜಿ ನಗರಸಭೆ ಸದಸ್ಯೆ ಬಿ.ಜಿ. ಲೋಕಮ್ಮ, ನಿವೃತ್ತ ಶಿಕ್ಷಕ ಎಸ್.ಜಿ. ಶಿವಾನಂದಪ್ಪ ವಹಿಸಿದ್ದರು. ಕಂದಗಲ್ಲು ಹೆಚ್. ಸಿದ್ಧವೀರಪ್ಪ ಪ್ರೌಢಶಾಲೆ ಶಿಕ್ಷಕರು ಕಾರ್ಯಕ್ರಮ ನಿರ್ವಹಿಸಿದರು.



ಜಗಳೂರು ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು, ಹಟ್ಟಿ ಚಿನ್ನದ ಗಣಿ ನಿಗಮದ ಮಾಜಿ ಅಧ್ಯಕ್ಷರು, ರಾಷ್ಟ್ರೀಯ ಉಪಾಧ್ಯಕ್ಷರು, ಬಿಜೆಪಿ ಎಸ್.ಟಿ. ಮೋರ್ಚಾ, ಸರಳ, ಸಜ್ಜನಿಕೆಯ ರಾಜಕಾರಣಿಗಳು, ಕ್ರೀಡಾಭಿಮಾನಿಗಳು, ಕೋಟಿ ಕೋಟಿ ಅನುದಾನ ತಂದು ಅಭಿವೃದ್ಧಿ ಹರಿಕಾರರಾಗಿರುವ ಜನಪರ ಕಾಳಜಿಯ ನಮ್ಮ ನೆಚ್ಚಿನ ನಾಯಕರಾದ ಸನ್ಮಾನ್ಯ

ಶ್ರೀ ಎಸ್.ವಿ.ರಾಮಚಂದ್ರ

ಅವರಿಗೆ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳನ್ನು ಸಲ್ಲಿಸುತ್ತಾ, ಶ್ರೀಯುತರಿಗೆ ಆಯುರಾರೋಗ್ಯ ಭಾಗ್ಯವನ್ನು ಸದಾ ನೀಡಲಿ ಎಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

ಜಗಳೂರು ವಿಧಾನಸಭಾ ಕ್ಷೇತ್ರಕ್ಕೆ 2018-2019 ಮತ್ತು 2019-2020 ಸಾಲಿಗೆ ಮಾನ್ಯ ಶಾಸಕರಾದ ಶ್ರೀ ಎಸ್.ವಿ. ರಾಮಚಂದ್ರರವರು ವಿವಿಧ ಇಲಾಖೆಗಳಿಗೆ ಸರ್ಕಾರದಿಂದ ತಂದ ಅನುದಾನ ಹಂಚಿಕೆ ವಿವರ, ಇಲಾಖಾವಾರು ಹಂಚಿಕೆಯಾದ/ಕಾಮಗಾರಿಗಳ ವಿವರ

1) **ಡಾ. ಶ್ರೀ ಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳ ಕೃಪಾಶೀರ್ವಾದಗಳೊಂದಿಗೆ ಹಾಗೂ ಇವರ ಮಾರ್ಗದರ್ಶನದಿಂದ ಜಗಳೂರು ವಿಧಾನಸಭಾ ಕ್ಷೇತ್ರದ 57 ಕೆರೆಗಳಿಗೆ ನೀರು ತುಂಬಿಸುವ ಬೃಹತ್ ಯೋಜನೆ - 640 ಕೋಟಿ.**
2) ಲೋಕೋಪಯೋಗಿ ಬಂದರು, ಒಳನಾಡು ಜಲ ಸಾರಿಗೆ ಜಿಲ್ಲಾ ಮುಖ್ಯರಸ್ತೆ, ರಾಜ್ಯ ಹೆದ್ದಾರಿ, ಗ್ರಾಮೀಣ ರಸ್ತೆ, ಮುಖ್ಯಮಂತ್ರಿ ಗ್ರಾಮ ಸಡಕ್ ಇತರೆ ರಸ್ತೆಗಳು - **97 ಕೋಟಿ, 10 ಲಕ್ಷ.**
3) ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣ ಭಾಗದ ರಸ್ತೆ ಅಭಿವೃದ್ಧಿ ಡಾಂಬರೀಕರಣ, ಬ್ರಿಡ್ಜ್, ಇತರೆ ಕಾಮಗಾರಿ - **24 ಕೋಟಿ14 ಲಕ್ಷ. 7 ಕೋಟಿ** ಮಂಜೂರಾತಿಗಾಗಿ ಬಾಕಿ ಇದೆ.
4) ಶಿಕ್ಷಣ ಇಲಾಖೆ, ಶಾಲಾ ಬಿಲ್ಡಿಂಗ್, ದುರಸ್ತಿ, ಕಾಂಪೌಂಡ್ - **2 ಕೋಟಿ 30 ಲಕ್ಷ.**
5) ಸಣ್ಣ ನೀರಾವರಿ, ಬೃಹತ್, ವಿ.ಜ.ನಿ.ನಿ. ನೀರಾವರಿ, ಜಲ ಸಂಪನ್ಮೂಲ, ಕೆರೆ ಹೂಳೆತ್ತುವುದು, ಚೆಕ್ ಡ್ಯಾಂ - **18 ಕೋಟಿ 20 ಲಕ್ಷ** ಇದರಲ್ಲಿ 2 ಕೋಟಿ ಟೆಂಡರ್ ಪ್ರಗತಿಯಲ್ಲಿದೆ.
6) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಚೆಕ್ ಡ್ಯಾಂ ನಿರ್ಮಾಣ, ಮತ್ತು ರಸ್ತೆ ಅಭಿವೃದ್ಧಿ - **1 ಕೋಟಿ.**
7) ಅಲ್ಪಸಂಖ್ಯಾತ ಮತ್ತು ಹಿಂದುಳಿದ ಇಲಾಖೆ ಮತ್ತು ನಿಗಮ ಕಾಮಗಾರಿಗಳು, ಸಾರ್ವಜನಿಕ ಸಾಲ ಸೌಲಭ್ಯ, ಕೊಳವೆ ಬಾವಿ, ವೈಯಕ್ತಿಕ ಸಾಲ - **6 ಕೋಟಿ 40 ಲಕ್ಷ.**
8) ಪಟ್ಟಣ ಪಂಚಾಯ್ತಿ, ಬೀದಿ ದೀಪ, ರಸ್ತೆ, ಒಳಚರಂಡಿ ಮತ್ತು ಅಭಿವೃದ್ಧಿ ಕಾರ್ಯ, ಹೈಮಾಸ್ಟ್ ಲೈಟ್, ಸರ್ಕಲ್ ಅಭಿವೃದ್ಧಿ - **7 ಕೋಟಿ 20 ಲಕ್ಷ. 48 ಕೋಟಿ** ಮಂಜೂರಾತಿಗಾಗಿ ಬಾಕಿಯಿದೆ.
9) ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ನಿಗಮ ವಾಲ್ಮೀಕಿ ಭವನ, ಸಿ.ಸಿ. ರಸ್ತೆಗಳು ಮತ್ತು ಗಂಗಾಕಲ್ಯಾಣ ಕಾಮಗಾರಿಗಳು, ಸಾರ್ವಜನಿಕ ಸಾಲ ಸೌಲಭ್ಯ, ಕೊಳವೆ ಬಾವಿ, ವೈಯಕ್ತಿಕ ಸಾಲ - **9 ಕೋಟಿ 40 ಲಕ್ಷ.**
10) ಸಮಾಜ ಕಲ್ಯಾಣ ಇಲಾಖೆ ಮತ್ತು ನಿಗಮಗಳಿಂದ ಸಿ.ಸಿ. ರಸ್ತೆಗಳು, ಮತ್ತು ಗಂಗಾ ಕಲ್ಯಾಣ ಸಮುದಾಯ ಭವನ ಕಾಮಗಾರಿಗಳು, ಸಾರ್ವಜನಿಕರಿಗೆ ಸಾಲ ಸೌಲಭ್ಯ - **7 ಕೋಟಿ 15 ಲಕ್ಷ.**
11) ಕೃಷಿ, ತೋಟಗಾರಿಕೆ, ಅರಣ್ಯ, ಆರೋಗ್ಯ, ಪಶು ಸಂಗೋಪನೆ, ರೇಷ್ಮೆ, ಕೈಮಗ್ಗ, ಮಹಿಳಾ ಮತ್ತು ಮಕ್ಕಳ, ಮೀನುಗಾರಿಕೆ, ಸಹಕಾರ, ಕಂದಾಯ, ಕ್ರೀಡೆ, ಆಯುರ್ವೇದ (ರೈತರಿಗೆ, ಪ್ರೋತ್ಸಾಹ ಧನ, ಯಂತ್ರೋಪಕರಣ, ಪರಿಕಗಳು, ಸಾಲ ಸೌಲಭ್ಯ ಮತ್ತು ಇತರೆ ಸೇವೆಗಳು ಮತ್ತು ಕುಡಿಯುವ ನೀರು) - **52 ಕೋಟಿ 60 ಲಕ್ಷ.** ಒಟ್ಟು **922 ಕೋಟಿ 50 ಲಕ್ಷ.**

ಎಸ್.ವಿ.ಆರ್. ಅಭಿಮಾನಿ ಬಳಗದಿಂದ

ಜನ್ಮ ದಿನದ ಆತ್ಮೀಯ ಶುಭಾಶಯಗಳು...

JANATHAVANI - RNI No: 27369/75, KA/SK/CTA-275/2018-2020. O/P @ J.D. Circle P.O. Published and owned by M.S.Vikas, Printed by M.S. Vikas, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor M.S.Vikas.